# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 01, 2021

ಸಂಪುಟ : 48 ಸಂಚಿಕೆ : 171 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



A TATA PRODUCT

TANISHQ PRESENTS



ಸರ್ವರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಈ ದಿನ ಸಿಂಗಾರಕ್ಕೆ ಅಲಂಕಾರ, ಆಭರಣಗಳದ್ದು, ಈ ದಿನ ಬದುಕನ್ನು ಹಬ್ಬದ ಹಾಗೆ ಆಚರಿಸಬೇಕು

ಈ ದಿನ ದೀಪಾವಳಿ ನೆಪವಿದೆ

ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.

Ph: 63647-95111



20% ವರೆಗೆ ಕಡಿತ

ಚಿನ್ನದ ಆಭರಣಗಳ ತಯಾರಿಕ ಶುಲ್ಕಗಳ ಮತ್ತು ಡೈಮಂಡ್ (ವಜ್ರದ) ಆಭರಣಗಳ ಮೌಲ್ಯದ ಮೇಲೆ


# ಹೆತ್ತವರ ಸನಿಹದಲ್ಲೇ ಪುನೀತ್ ಚಿರನಿದ್ರೆಗೆ

## ಭದ್ರತಾ ದೃಷ್ಟಿಯಿಂದ ಮುಂಜಾನೆಯೇ ನೆರವೇರಿದ ಅಂತ್ಯಕ್ರಿಯೆ

ಬೆಂಗಳೂರು, ಅ. 31 – ಕನ್ನಡ ಚಿತ್ರರಂಗದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಅಂತ್ಯಕ್ರಿಯೆಯನ್ನು ಭಾನುವಾರ ಮುಂಜಾನೆ ಕಂಠೀರವ ಕ್ರೀಡಾಂಗಣದಲ್ಲಿ ನೆರವೇರಿಸಲಾಗಿದೆ. ಅವರ ತಂದೆ ವರನಟ ರಾಜ್‌ಕುಮಾರ್ ಹಾಗೂ ತಾಯಿ ಪಾರ್ವತಮ್ಮ ಅವರ ಸಮಾಧಿ ಪಕ್ಕದಲ್ಲೇ ಪುನೀತ್ ಅಂತ್ಯಕ್ರಿಯೆ ನೆರವೇರಿದೆ.



ಕನ್ನಡದ ಬಹುಬೇಡಿಕೆಯ ನಟರಾಗಿದ್ದ ಪುನೀತ್, ಶುಕ್ರವಾರ ಹೃದಯಾಘಾತದಿಂದ ನಿಧನರಾಗಿದ್ದರು. ಅವರ ಪಾರ್ಥಿವ ಶರೀರದ ಅಂತಿಮ ಮೆರವಣಿಗೆ ಬೆಳಿಗ್ಗೆ 5.30ಕ್ಕೆ ಕಂಠೀರವ ಕ್ರೀಡಾಂಗಣದಿಂದ ಆರಂಭವಾಯಿತು. ಶುಕ್ರವಾರದಿಂದ ಅಂತಿಮ ದರ್ಶನಕ್ಕಾಗಿ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಶುಕ್ರವಾರ ಸಂಜೆಯ ನಂತರ ಸಾವಿರಾರು ಅಭಿಮಾನಿಗಳು ಹಾಗೂ ಹಿತೈಷಿಗಳು ಅವರಿಗೆ ಅಂತಿಮ ನಮನ ಸಲ್ಲಿಸಿದರು. ಬೆಳಿಗ್ಗೆ ಆರಂಭವಾದ ಅಂತಿಮ ಯಾತ್ರೆ, 6.30ಕ್ಕೆ ಕಂಠೀರವ ಸ್ಟುಡಿಯೋದಲ್ಲಿ ಅಂತ್ಯವಾಯಿತು.

ಈ ಹಿಂದೆ ಬೆಳಿಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲು ನಿರ್ಧರಿಸಲಾಗಿತ್ತು. ಆದರೆ, ರಕ್ಷಣಾ ಕಾರಣಗಳಿಂದಾಗಿ ಕುಟುಂಬದವರ ಒಪ್ಪಿಗೆ ಮೇರೆಗೆ ನಿಗದಿತ ಸಮಯಕ್ಕಿಂತ ಸಾಕಷ್ಟು ಮೊದಲೇ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಸರ್ಕಾರದ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಪುಟ ಸಹೋದ್ಯೋಗಿಗಳು, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಸಿದ್ದರಾಮಮಯ್ಯ, ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಅಗಲಿದ ನಟನಿಗೆ ಅಂತಿಮ ನಮನ ಸಲ್ಲಿಸಿದರು.

ಚಿಕ್ಕಂದಿನಿಂದಲೂ ಪುನೀತ್ ಒಡನಾಟದಲ್ಲಿದ್ದ ಬೊಮ್ಮಾಯಿ, ಅಂತ್ಯಕ್ರಿಯೆ ವೇಳೆ ಭಾವುಕರಾಗಿ ಪುನೀತ್ ತಲೆಗೆ ಮುತ್ತಿಟ್ಟರು. ಭದ್ರತಾ ಕಾರಣ ಹಾಗೂ ಸ್ಥಳಾಭಾವದಿಂದಾಗಿ ಅಂತ್ಯಕ್ರಿಯೆ ಸ್ಥಳಕ್ಕೆ ಆಯ್ದ ಗಣ್ಯರು ಹಾಗೂ ಕುಟುಂಬದ ಸದಸ್ಯರಿಗಷ್ಟೇ ಪ್ರವೇಶ ನೀಡಲಾಗಿತ್ತು.

ಸಕಲ ಸರ್ಕಾರಿ ಗೌರವಗಳೊಂದಿಗೆ ಪುನೀತ್ ಅಂತ್ಯಕ್ರಿಯೆ ನೆರವೇರಿಸಲಾಯಿತು. ಅಂತ್ಯಕ್ರಿಯೆ ವೇಳೆ ರಾಷ್ಟ್ರಗೀತೆ ನುಡಿಸಿ, ಮೂರು ಸುತ್ತು ಕುಶಾಲ ತೋಪು ಸಿಡಿಸಲಾಯಿತು. ನಂತರ ಎರಡು ನಿಮಿಷಗಳ ಮೌನಾಚರಣೆ ಮಾಡಲಾಯಿತು.

ಪುನೀತ್ ಕಳೇಬರಕ್ಕೆ ಹೊದಿಸಿದ್ದ ತ್ರಿವರ್ಣ ಧ್ವಜವನ್ನು ಅವರ ಪತ್ನಿ ಅಶ್ವಿನಿ ರೇವಂತ್ ಅವರಿಗೆ ಮುಖ್ಯಮಂತ್ರಿ ಬೊಮ್ಮಾಯಿ ಹಸ್ತಾಂತರಿಸಿದರು.

ಪುನೀತ್ ಅವರ ಅಣ್ಣ ರಾಘವೇಂದ್ರ ರಾಜಕುಮಾರ್ ಹಿರಿಯ ಪುತ್ರ ವಿನಯ್ ರಾಜ್‌ಕುಮಾರ್ ಅವರು ಈಡಿಗ ಸಮುದಾಯದ ಸಂಪ್ರದಾಯದಂತೆ (4ನೇ ಪುಟಕ್ಕೆ)


## ತೃತೀಯ ವರ್ಷದ ಪುಣ್ಯಸ್ಮರಣೆ

ದಾವಣಗೆರೆಯ ಗಣ್ಯವರ್ತಕರೂ ಮತ್ತು ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದ



### ಶ್ರೀ ಮುದೇಗೌಡ್ರು ರೇವಣಸಿದ್ದಪ್ಪ

ಜನನ : 01.04.1933 ಲಿಂಗೈಕ್ಯ : 01.11.2018

ಅವರು ನಿಧನರಾಗಿ ಇಂದಿಗೆ (ದಿನಾಂಕ 01.11.2021) ಮೂರು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ದೇವೀರಮ್ಮ ಮುದೇಗೌಡ್ರು

ಮಕ್ಕಳು, ಸೊಸೆಯಂದಿರು : ಶ್ರೀ ಶಿವಕುಮಾರ್ ಮುದೇಗೌಡ್ರು, ಶ್ರೀಮತಿ ಸುನಂದ,
ಡಾ|| ಬಸವರಾಜ್ ಮುದೇಗೌಡ್ರು, ಶ್ರೀಮತಿ ಗೀತಾ, (Qatar)
ಶ್ರೀ ಸಿದ್ದರಾಮೇಶ್ವರ ಮುದೇಗೌಡ್ರು, ಶ್ರೀಮತಿ ಜಯಶ್ರೀ
ಶ್ರೀ ಸುರೇಶ್‌ಬಾಬು ಮುದೇಗೌಡ್ರು, ಶ್ರೀಮತಿ ರೇಖಾ,
ಶ್ರೀಮತಿ ಅಕ್ಷತಾ, ಶ್ರೀ ನಿರೂಪ್

ಮೊಮ್ಮಕ್ಕಳು : ಶ್ರೀಮತಿ ಸುಷ್ಮಾ ಶ್ರೀ ಸಂತೋಷ್
ಶ್ರೀಮತಿ ಸೌಮ್ಯ, ಡಾ|| ರಜನಿಕಾಂತ್ ,
ಶ್ರೀಮತಿ ಕೈಲಿ (Kylie) ಶ್ರೀ ವರುಣ್ ಎಂ.ಬಿ. North Corolina (USA)
ಆಶೀಶ್ ಎಂ.ಬಿ. ಕ್ಯಾಲಿಫೋರ್ನಿಯಾ, (USA),
ನಿಶಾ, ನಿಖಿಲ್ ಮುದೇಗೌಡ್ರು, ಕು|| ಪೂಜಾ ಮುದೇಗೌಡ್ರು, Little Rock, (USA)

ಮರಿಮೊಮ್ಮಕ್ಕಳು : ಸ್ತುತಿ, ದ್ವಿಜ, ದ್ವಿತಿ, ನಿಯಮ್ ಎಂ. ಪ್ರೀತಲ್, ಆಕಾಂಕ್ಷಾ ಎಂ., ನಿಯಾಮ್ ವರುಣ್ ಮತ್ತು ನೀಲ್ ವರುಣ್.

ದಿ|| ಮುದೇಗೌಡ್ರ ಸಿದ್ದಲಿಂಗಪ್ಪ ಮತ್ತು ಕುಟುಂಬ ವರ್ಗ, ಮುದೇಗೌಡ್ರ ಮನೆತನದವರು


**ದಾವಣಗೆರೆಯ ಹಿಮೋಫಿಲಿಯಾ ಸೊಸೈಟಿ, ಜಗಳೂರಿನ ಸುಲ್ತಾನ್ ಬೀ ಸೇರಿ**

# 66 ಸಾಧಕರು, 10 ಸಂಘ, ಸಂಸ್ಥೆಗಳಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

ಬೆಂಗಳೂರು, ಅ. 31 – 2020-21ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪುರಸ್ಕೃತರ ಪಟ್ಟಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದ್ದು, ಈ ಬಾರಿ 66 ಸಾಧಕರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಇದೇ ವೇಳೆ 10 ಸಂಘ – ಸಂಸ್ಥೆಗಳಿಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿಯನ್ನೂ ಪ್ರಕಟಿಸಲಾಗಿದೆ.

ದಾವಣಗೆರೆಯ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ ದೊರೆತಿದೆ. ಜಿಲ್ಲೆಯ ಜಗಳೂರಿನ ನಾಟಿ ವೈದ್ಯರಾದ ಡಾ. ಸುಲ್ತಾನ್ ಬೀ ಅವರು ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ ಪ್ರಶಸ್ತಿ ಪಡೆದಿದ್ದಾರೆ.

**ಪ್ರಶಸ್ತಿ ಪುರಸ್ಕೃತರು** : ಸಾಹಿತ್ಯ : ಮಹಾದೇವ ಶಂಕನಪುರ, ಪ್ರೊ. ಡಿ.ಟಿ. ರಂಗಸ್ವಾಮಿ, ಜಯಲಕ್ಷ್ಮಿ ಮಂಗಳಮೂರ್ತಿ, ಅಜ್ಜಂಪುರ ಮಂಜುನಾಥ್, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಸಿದ್ದಪ್ಪ ಬಿದರಿ.

**ರಂಗಭೂಮಿ** : ಫಕೀರಪ್ಪ ರಾಮಪ್ಪ ಕೊಡಾಯಿ, ಪ್ರಕಾಶ್ ಬೆಳವಾಡಿ, ರಮೇಶ್ ಗೌಡ ಪಾಟೀಲ, ಎನ್. ಮಲ್ಲೇಶಯ್ಯ, ಸಾವಿತ್ರಿ ಗೌಡರ್.

**ಜಾನಪದ** : ಆರ್.ಬಿ. ನಾಯಕ, ಗೌರಮ್ಮ ಹುಚ್ಚಪ್ಪ ಮಾಸ್ತರ್, ದುರ್ಗಪ್ಪ ಚೆನ್ನದಾಸರ, ಬನ್ನಂಜೆ ಬಾಬು ಅಮೀನ್, ಮಲ್ಲಿಕಾರ್ಜುನ ರಾಚಪ್ಪ ಮುದಕವಿ, ವೆಂಕಪ್ಪ ಗೋವಿಂದಪ್ಪ ಭಜಂತ್ರಿ, ಮಹಾರುದ್ರಪ್ಪ ವೀರಪ್ಪ ಇಟಗಿ.

**ಸಂಗೀತ** : ತ್ಯಾಗರಾಜು ಸಿ., ಹೆರಾಲ್ಡ್ ಸಿರಿಲ್ ಡಿಸೋಜ. **ಶಿಲ್ಪಕಲೆ** : ಡಾ. ಜಿ. ಜ್ಞಾನಾನಂದ, ವೆಂಕಣ್ಣ ಚಿತ್ರಗಾರ. **ಸಮಾಜ ಸೇವೆ** : ಸೂಲಗಿತ್ತಿ ಯಮುನವ್ವ, ಮದಲಿ ಮಾದಯ್ಯ, ಮುನಿಯಪ್ಪ ಬೊಮ್ಮಲೂರು, ಬಿ.ಎಲ್. ಪಾಟೀಲ್, ಡಾ. ಜೆ. ಎನ್. ರಾಮಕೃಷ್ಣೇಗೌಡ. **ವೈದ್ಯಕೀಯ** : ಡಾ. ಸುಲ್ತಾನ್ ಬಿ. ಜಗಳೂರು, ಡಾ. ವ್ಯಾಸ ದೇಶಪಾಂಡೆ, ಡಾ ಎ.ಆರ್. ಪ್ರದೀಪ್, ಡಾ. ಸುರೇಶ್ ರಾವ್, ಡಾ. ಸುದರ್ಶನ್, ಡಾ. ಶಿವನಗೌಡ ರುದ್ರಗೌಡ ರಾಮನಗೌಡರ್. **ವಿಜ್ಞಾನ ತಂತ್ರಜ್ಞಾನ** : ಡಾ. ಹೆಚ್.ಎಸ್. ಸಾವಿತ್ರಿ, ಪ್ರೊ. ಜಿ.ಯು. ಕುಲ್ಕರ್ಣಿ. **ಕೃಷಿ** : ಡಾ. ಸಿ ನಾಗರಾಜ್, ಗುರುಲಿಂಗಪ್ಪ ಮೇಲ್ದೊಡ್ಡಿ, ಶಂಕರಪ್ಪ ಅಮ್ಮನಘಟ್ಟ. **ಪರಿಸರ** : ಮಹಾದೇವ ವೇಳಿಜಾ, ಬೈಕಂಪಾಡಿ ರಾಮಚಂದ್ರ.

**ಪತ್ರಿಕೋದ್ಯಮ** : ಪಟ್ನಂ ಅನಂತ ಪದ್ಮನಾಭ, ಯು.ಬಿ. ರಾಜಲಕ್ಷ್ಮಿ. **ನ್ಯಾಯಾಂಗ** : ಸಿ.ವಿ. ಕೇಶವಮೂರ್ತಿ. **ಹೈ - ಏಕೀಕರಣ ಹೋರಾಟ** : ಮಹಾದೇವಪ್ಪ ಕಡೆಚೂರು. **ಯೋಗ** : ಭ.ಮ. ಶ್ರೀಕಂಠ, ಡಾ ರಾಘವೇಂದ್ರ ಶೆಣೈ. **ಉದ್ಯಮ** : ಶ್ಯಾಮರಾಜು.

**ಆಡಳಿತ** : ಹೆಚ್.ಆರ್. (4ನೇ ಪುಟಕ್ಕೆ)

# ಜೈಡಸ್ ಕ್ಯಾಡಿಲಾ ಲಸಿಕೆ ಬೆಲೆ 265 ರೂ.ಗೆ ಇಳಿಕೆ


ನವದೆಹಲಿ, ಅ. 31 – ಜೈಡಸ್ ಕ್ಯಾಡಿಲಾ ತನ್ನ ಕೊರೊನಾ ಲಸಿಕೆಯ ಬೆಲೆಯನ್ನು ಡೋಸ್‌ಗೆ 265 ರೂ.ಗಳಿಗೆ ಇಳಿಕೆ ಮಾಡಲು ಸಮ್ಮತಿಸಿದೆ. ಸರ್ಕಾರದ ಜೊತೆ ಚರ್ಚಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆಯಾದರೂ, ಅಂತಿಮ ಒಪ್ಪಂದ ಆಗಿಲ್ಲ ಎಂದು ಮೂಲಗಳು ತಿಳಿಸಿವೆ.

ಜೈಡಸ್ ಕ್ಯಾಡಿಲಾದ ಜೈಕೊವ್ - ಡಿ ಲಸಿಕೆಯನ್ನು 12 ವರ್ಷಕ್ಕೂ ಮೇಲಿನವರಿಗೆ ನೀಡಬಹುದಾಗಿದೆ. ಸೂಜಿ ರಹಿತವಾದ ಈ ಲಸಿಕೆ ನೀಡಲು ವಿಶೇಷ ಉಪಕರಣ ಬಳಲಾಗುತ್ತದೆ. ಈ ಉಪಕರಣದ ಪ್ರತಿ ಬಳಕೆಗೆ 93 ರೂ. ವೆಚ್ಚವಾಗುತ್ತದೆ. ಹೀಗಾಗಿ ಪ್ರತಿ ಡೋಸ್ ಲಸಿಕೆಯ ಒಟ್ಟಾರೆ ವೆಚ್ಚ 358 ರೂ. ಆಗಲಿದೆ. ಜೈಡಸ್ ಕ್ಯಾಡಿಲಾ ಈ ಹಿಂದೆ ಮೂರು ಡೋಸ್‌ಗಳಿಗೆ ಒಟ್ಟು 1,900 (2ನೇ ಪುಟಕ್ಕೆ)

# ಲಸಿಕೆ ಕಡಿಮೆ : 40 ಜಿಲ್ಲಾಧಿಕಾರಿಗಳ ಜೊತೆ ಪ್ರಧಾನಿ ಮೋದಿ ಚರ್ಚೆ

ನವದೆಹಲಿ, ಅ. 31 – ಲಸಿಕೆ ನೀಡುವುದು ಕಡಿಮೆ ಇರುವ 40 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವೆಂಬರ್ 3ರಂದು ಪರಿಶೀಲನಾ ಸಭೆ ನಡೆಸಲಿದ್ದಾರೆ.

ಈ ಬಗ್ಗೆ ಪ್ರಧಾನ ಮಂತ್ರಿ ಕಚೇರಿ ಹೇಳಿಕೆ ನೀಡಿದ್ದು, ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಾಗುವುದು. ಮೊದಲ ಡೋಸ್ ಶೇ.50ಕ್ಕೂ ಕಡಿಮೆ ನೀಡಿರುವ ಹಾಗೂ ಎರಡನೇ ಡೋಸ್ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಪ್ರಧಾನಿ ಚರ್ಚೆ ನಡೆಸಲಿದ್ದಾರೆ. ಜಾರ್ಖಂಡ್, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಹಾರಾಷ್ಟ್ರ ಹಾಗೂ ಮೇಘಾಲಯ ಸೇರಿದಂತೆ ಹಲವು ರಾಜ್ಯಗಳಲ್ಲಿ ಈ ಜಿಲ್ಲೆಗಳಿವೆ. ಈ ಜಿಲ್ಲೆಗಳ ಮುಖ್ಯಮಂತ್ರಿಗಳೂ ಸಹ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಲಸಿಕೆ ಚುರುಕುಗೊಳಲಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿರುವ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, 10.34 ಕೋಟಿ ಜನರು ಅವಧಿ ಮೀರಿದ್ದರೂ ಇನ್ನೂ ಎರಡನೇ ಡೋಸ್ ಲಸಿಕೆ ಪಡೆದಿಲ್ಲ ಎಂದಿದ್ದರು.

|| ಶ್ರೀ ಕಲ್ಲೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ಜಿಲ್ಲೆ ಜಗಳೂರು ಟೌನ್ ವಾಸಿ ಶ್ರೀಮತಿ ಆಶಾ ಬಸವರಾಜು ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು. ದಿನಾಂಕ : 28.10.2021ನೇ ಗುರುವಾರ ಬೆಳಿಗ್ಗೆ 6.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ

### ಶ್ರೀ ಜಿ.ಎಸ್. ಬಸವರಾಜು

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 1.11.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಶ್ರೀ ಸದ್ಯೋಜಾತ ಸ್ವಾಮಿಗಳವರ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಆಶಾ ಬಸವರಾಜು, ಶ್ರೀಮತಿ ತನುಜ, ಶ್ರೀ ಮಧು ಬಿ. ಗೌಡ, ಶ್ರೀಮತಿ ಮೌನಗೌಡ, ಶ್ರೀ ವಿನಯ್ ಪಟೇಲ್, ಸಹೋದರ, ಸಹೋದರಿಯರು ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಜಗಳೂರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.






ಮದುವೆಯ ಖರೀದಿಗಳಿಗಾಗಿ ವಿಶೇಷ ಸೌಲಭ್ಯಗಳು
ಮುಂಗಡವಾಗಿ 5% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ, ಮತ್ತು ಚಿನ್ನದ ದರದಲ್ಲಾಗುವ ಏರಿಳಿತದಿಂದ ಸಂರಕ್ಷಿಸಲ್ಪಡಿ.

4.9%

13.8%

ರೂಪಾಯಿ 50,000 ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಪ್ರತಿ ಸ್ಟಡೆಡ್ ರತ್ನಾಭರಣಗಳ ಅಥವಾ ವಜ್ರಾಭರಣಗಳ ಖರೀದಿಯೊಂದಿಗೆ ಉಚಿತ ಚಿನ್ನದ ನಾಣ್ಯ ಪಡೆಯಿರಿ.

GOLDEN BLOOM, GOLDEN GLOW
ಆಭರಣ ಖರೀದಿ ಯೋಜನೆಯೊಂದಿಗೆ ನಿಮ್ಮ ಹಣಕ್ಕೆ ಅತ್ಯುತ್ತಮ ಮೌಲ್ಯ ಪಡೆಯಿರಿ.

9.8%

4.9%

ಈ ಧಂತೇರಾಸ್‌ಗೆ ಚಿನ್ನವನ್ನು ಮುಂಗಡವಾಗಿ ಕಾಯ್ದಿರಿಸುವ ಮೂಲಕ ಬೆಳ್ಳಿಯನ್ನು ಉಚಿತವಾಗಿ ಪಡೆಯಿರಿ.

Brides Of India 2021 ರ ಕ್ಯಾಟಲಾಗ್‌ಅನ್ನು ಡೌನ್‌ಲೋಡ್ ಮಾಡಲು ಈ QR ಕೋಡನ್ನು ಸ್ಕ್ಯಾನ್ ಮಾಡಿ.

MALABAR FAIR PRICE PROMISE
For Everyone. Everyday. Everywhere.

5% EXTRA CASHBACK* SBI card

*Min. Tran.: ₹25,000, Max. Cashback: ₹2,500 per card account. Validity: 22 Oct - 03 Nov 2021. T&C Apply.

ಕನ್ನಡ ರಾಜ್ಯೋತ್ಸವದ ಶುಭಾಶಯಗಳು

1. ಸಂಪೂರ್ಣ ಪಾರದರ್ಶಕತೆ 2. ಜೀವನಪರ್ಯಂತ ಉಚಿತ ಮೇಂಟೆನೆನ್ಸ್ 3. ಚಿನ್ನ ವಿನಿಮಯದಲ್ಲಿ ಶೂನ್ಯ ಕಡಿತ 4. 100% BIS 916 ಹಾಲ್‌ಮಾರ್ಕ್ ಹೊಂದಿರುವ ಶುದ್ಧ ಚಿನ್ನ 5. ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು 6. ಬೈಬ್ಯಾಕ್ ಗ್ಯಾರಂಟಿ 7. ಆಭರಣವು ಪೂರಕ ವಿಮೆಗೆ ಒಳಪಡುತ್ತದೆ 8. ನ್ಯಾಯಯುತ ಬೆಲೆಯ ನೀತಿಗಳು 9. ಜವಾಬ್ದಾರಿಯುತ ಮೂಲದ ಉತ್ಪನ್ನಗಳು 10. ಕಾರ್ಮಿಕರಿಗೆ ನ್ಯಾಯಯುತ ಅಭ್ಯಾಸಗಳು

ದಾವಣಗೆರೆ, ಮಂಡಿಪೇಟೆ. ದೂ: 08192-231916, 7994435487

INDIA | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

ಮಲಬಾರ್ ಗೋಲ್ಡ್ & ಡೈಮಂಡ್ಸ್

# ಆಟಕ್ಕಾಗಿ ಅತಿಯಾಗಿ ದೇಹ ಬಳಲಿಸಬೇಡಿ

## ವೇಟ್ ಲಿಫ್ಟಿಂಗ್ ಪಂದ್ಯಾವಳಿ ಉದ್ಘಾಟಿಸಿದ ಶಾಸಕ ಎಸ್.ಎ. ರವೀಂದ್ರನಾಥ್

ದಾವಣಗೆರೆ, ಅ. 31 – ದೇಹವನ್ನು ಅತಿಯಾಗಿ ಬಳಲಿಸದೇ ಆರೋಗ್ಯ ಕಾಯ್ದುಕೊಳ್ಳಲು ಮುತುವರ್ಜಿ ವಹಿಸಿ ಕ್ರೀಡೆಗಳಲ್ಲಿ ತೊಡಗುವಂತೆ ಶಾಸಕ ಎಸ್.ಎ. ರವೀಂದ್ರನಾಥ್ ಕಿವಿಮಾತು ಹೇಳಿದ್ದಾರೆ.

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ವೇಟ್ ಲಿಫ್ಟಿಂಗ್ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ರಾಜ್ಯ ವೇಟ್ ಲಿಫ್ಟರ್ಸ್ ಅಸೋಸಿಯೇಷನ್, ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಹಿರಿಯ ಮತ್ತು ಕಿರಿಯ ಮಹಿಳೆ - ಪುರುಷ, ಬಾಲಕ -ಬಾಲಕಿಯರ ವೇಟ್ ಲಿಫ್ಟಿಂಗ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ದೇಹದಲ್ಲಿ ನಿಶ್ಶಕ್ತಿ ಕಾಣಿಸಿಕೊಂಡ ನಂತರವೂ ಗೆಲ್ಲಬೇಕೆಂಬ ಹಠದಿಂದ ವೇಟ್ ಲಿಫ್ಟಿಂಗ್‌ನಲ್ಲಿ ತೊಡಗಬಾರದು. ಮೊನ್ನೆ ನಿಧನರಾದ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಆದ ಪರಿಸ್ಥಿತಿಯನ್ನು ಕ್ರೀಡಾಪಟುಗಳು ತಂದುಕೊಳ್ಳಬಾರದು ಎಂದವರು ಹೇಳಿದರು.

ಶ್ರಮ ಹೆಚ್ಚು ಮಾಡದೇ ನಿಮ್ಮ ಕೈಲಾದಷ್ಟು ಪ್ರಯತ್ನ ಪಡಿ. ಕೌಶಲ್ಯ ಹಾಗೂ ಸೂಕ್ತ ಸಮಯದಲ್ಲಿ ಲಿಫ್ಟಿಂಗ್ ಮೂಲಕ ಹೆಚ್ಚು ಸಾಧನೆ ಮಾಡಲು ಸಾಧ್ಯ ಎಂದ ಅವರು, ರಕ್ತದೊತ್ತಡ, ಸಕ್ಕರೆ ಮಟ್ಟ ಹಾಗೂ ಹೃದಯದ ಆರೋಗ್ಯದ ನಿಯಮಿತ ತಪಾಸಣೆಗೆ ಒಳಗಾಗುವಂತೆ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ಕೋವಿಡ್ ಎರಡನೇ ಅಲೆಯಲ್ಲಿ ಸ್ತಬ್ಧವಾಗಿದ್ದ ಕ್ರೀಡಾ ವಲಯ ಈಗ ಮತ್ತೆ ಚಟುವಟಿಕೆಯಿಂದ ಕೂಡಿದೆ. ವೇಟ್ ಲಿಫ್ಟಿಂಗ್‌ಗೆ ಪಾಲಿಕೆ ವತಿಯಿಂದ 2 ಲಕ್ಷ ರೂ. ನೀಡಲಾಗಿದೆ. ಶೀಘ್ರದಲ್ಲೇ ಮಹಿಳೆಯರಿಗಾಗಿ ಪಾಲಿಕೆಯಿಂದ ಪ್ರತ್ಯೇಕ ಜಿಮ್ ತೆರೆಯಲಾಗುವುದು ಎಂದು ಹೇಳಿದರು.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಎಸ್. ಹೆಚ್. ಆನಂದ ಗೌಡ ಮಾತನಾಡಿ, ಈ ಕ್ರೀಡಾಕೂಟದಲ್ಲಿ 260ಕ್ಕೂ ಹೆಚ್ಚು ಜನರು ಪಾಲ್ಗೊಂಡಿರುವುದು ಸಂತೋಷ ತಂದಿದೆ. ಪ್ರತಿಭೆಗಳನ್ನು ಆರಂಭದಲ್ಲೇ ಗುರುತಿಸಿ ಪ್ರೋತ್ಸಾಹ – ತರಬೇತಿ ನೀಡಲು ಇಂತಹ ಕ್ರೀಡಾಕೂಟಗಳು ನೆರವಾಗುತ್ತವೆ. ದಾವಣಗೆರೆಯಲ್ಲಿ ವೇಟ್ ಲಿಫ್ಟಿಂಗ್‌ಗೆ ನೆರವಾಗಲು ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಚಮನ್ ಸಾಬ್ ಹಾಗೂ ಬಿಜೆಪಿ ಮುಖಂಡ ಅನಿತ್ ಸಿದ್ದೇಶ್ವರ ಮಾತನಾಡಿದರು.

ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಕೆ.ಎಂ. ಸುರೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಚಿತ್ರನಟ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವೇದಿಕೆ ಮೇಲೆ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಪೈಲ್ವಾನ್, ಶಾಂತಕುಮಾರ ಸೋಗಿ, ಜಯಮ್ಮ ಗೋಣೆಪ್ಪ, ವೀಣಾ ನಂಜಪ್ಪ, ಗೌರಮ್ಮ ಗಿರೀಶ್, ಬಿಜೆಪಿ ಮುಖಂಡರಾದ ಎಂ. ಆನಂದ್, ಶ್ರೀನಿವಾಸ್, ಮುರುಗೇಶಪ್ಪ, ಆನಂದ್, ಶಿವಕುಮಾರ್ ದಾಸಕರಿಯಪ್ಪ, ಎಲ್.ಎಂ. ಕಲ್ಲೇಶ್, ಗಣೇಶ್ ರಾವ್, ಸುರೇಶ್ ಗಂಡಗಾಳೆ ಮತ್ತಿತರರು ಉಪಸ್ಥಿತರಿದ್ದರು. ಹೆಚ್. ಬಸವರಾಜ ಸ್ವಾಗತಿಸಿದರೆ, ಸಹನ ಮಂಜುನಾಥ್ ಪ್ರಾರ್ಥಿಸಿದರು.



### ಮೊಟ್ಟೆ ಹಿಡಿಸದೇ ವೇಟ್ ಲಿಫ್ಟಿಂಗ್ ಬಿಟ್ಟೆ

**ನಾನು ವಿದ್ಯಾರ್ಥಿ ದಿನಗಳಲ್ಲಿ ವೇಟ್ ಲಿಫ್ಟಿಂಗ್ ಕಲಿಯಲು ಮುಂದಾಗಿದ್ದೆ. ಆದರೆ, ನಿಶ್ಶಕ್ತಿ ಸಮಸ್ಯೆ ಕಾಣಿಸಿಕೊಂಡಿತು. ತರಬೇತುದಾರರು ಮೊಟ್ಟೆ - ಮಾಂಸ ತಿನ್ನುವಂತೆ ಸಲಹೆ ನೀಡಿದರು. ಸಸ್ಯಾಹಾರ ಬಿಟ್ಟು ಮಾಂಸಾಹಾರ ಸೇವಿಸುವುದು ಹಿಡಿಸದೇ ವೇಟ್ ಲಿಫ್ಟಿಂಗನ್ನೇ ಬಿಟ್ಟೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದರು. ದೇಹದಲ್ಲಿ ನಿಶ್ಶಕ್ತಿ ಕಾಣಿಸಿಕೊಂಡಾಗ ಹೆಚ್ಚು ಒತ್ತಡ ಹೇರಬಾರದು. ಹೆಣಗಾಡಿ ವೇಟ್ ಲಿಫ್ಟಿಂಗ್‌ನಲ್ಲಿ ತೊಡಗಬಾರದು ಎಂಬುದಕ್ಕೆ ಅವರು ತಮ್ಮ ಈ ಉದಾಹರಣೆ ನೀಡಿದರು.**

# ಕೊರೊನಾದಿಂದ ಮಕ್ಕಳ ಆತ್ಮಹತ್ಯೆ ಹೆಚ್ಚಳ

ನವದೆಹಲಿ, ಅ 31 – ಕೊರೊನಾದಿಂದ ಮಕ್ಕಳ ಮೇಲೆ ಹೆಚ್ಚು ಪರಿಣಾಮವಾಗುವುದಿಲ್ಲವಾದರೂ, ಕೊರೊನಾದಿಂದ ಉಂಟಾದ ಮಾನಸಿಕ ಒತ್ತಡದಿಂದಾಗಿ ಮಕ್ಕಳಲ್ಲಿ ಆತ್ಮಹತ್ಯೆ ಪ್ರಮಾಣ ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರದ ವರದಿಗಳು ತಿಳಿಸಿವೆ.

2020ರಲ್ಲಿ ದೇಶದಲ್ಲಿ 11,396 ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2019ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆ 9,613 ಆಗಿತ್ತು. 2018ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆ 9,413 ಆಗಿತ್ತು. 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆ ಶೇ.18ರಷ್ಟು ಹೆಚ್ಚಾಗಿದೆ.

ಕೌಟುಂಬಿಕ ಸಮಸ್ಯೆ, ಪ್ರೇಮ ಪ್ರಕರಣ ಹಾಗೂ ಅನಾರೋಗ್ಯ 18 ವರ್ಷದೊಳಗಿನ ಮಕ್ಕಳ ಆತ್ಮಹತ್ಯೆಗೆ ಪ್ರಮುಖ ಕಾರಣಗಳಾಗಿವೆ. ಸೈದ್ಧಾಂತಿಕ ಕಾರಣ, ನಿರುದ್ಯೋಗ, ದಿವಾಳಿ, ನಪುಂಸಕತೆ ಹಾಗೂ ಮಾದಕ ದುರ್ಬಳಕೆ ಸೇರಿದಂತೆ ಕೆಲ ಕಾರಣಗಳಿಂದಲೂ ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ದಳ (ಎನ್.ಸಿ. ಆರ್.ಬಿ.) ವರದಿ ತಿಳಿಸಿದೆ.

ಕೊರೊನಾ ಹಾಗೂ ಶಾಲೆಗಳು ಮುಚ್ಚಿರುವುದು, ಸಾಮಾಜಿಕ ಒಂಟಿತನಗಳ ಜೊತೆಗೆ ಹಿರಿಯರಲ್ಲಿ ಉಂಟಾಗಿರುವ ಉದ್ವಿಗ್ನತೆಯಿಂದಾಗಿ ಮಕ್ಕಳ ಮಾನಸಿಕ ಆರೋಗ್ಯ ಸಮಸ್ಯೆ ಹೆಚ್ಚಾಗಿದೆ ಎಂದು ಸೇವ್ ದಿ ಚಿಲ್ಡ್ರನ್ ಸಂಘಟನೆಯ ಉಪ ನಿರ್ದೇಶಕ ಪ್ರಭಾತ್ ಕುಮಾರ್ ಹೇಳಿದ್ದಾರೆ.

**ಮಕ್ಕಳ ಮನಸ್ಸು ಎಷ್ಟು ಮೃದು ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕಿದೆ. ಮಕ್ಕಳಲ್ಲಿನ ಮಾನಸಿಕ ವಿಷಯಗಳನ್ನು ಗುರುತಿಸಲು ಶಿಕ್ಷಕರಿಗೆ ತರಬೇತಿ ನೀಡಬೇಕಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಆಪ್ತಸಮಾಲೋಚನೆಗೆ ವ್ಯವಸ್ಥೆ ಮಾಡಬೇಕಿದೆ ಎಂದು ಮಾನಸಿಕ ಪ್ರಕೃತಿ ಪ್ರತಿಷ್ಠಾನದ ಆರೋಗ್ಯ ಪರಿಣಿತರಾದ ಪ್ರಕೃತಿ ಪೊದ್ದಾರ್ ಹೇಳಿದ್ದಾರೆ.**

ಮಕ್ಕಳಲ್ಲಿ ಆತ್ಮಹತ್ಯೆ ಸಂಖ್ಯೆ ಹೆಚ್ಚುತ್ತಿರುವುದು ವ್ಯವಸ್ಥೆಯ ವೈಫಲ್ಯ ತೋರಿಸುತ್ತದೆ. ಮಕ್ಕಳ ರಕ್ಷಣೆ ಪೋಷಕರು, ಕುಟುಂಬ, ನೆರೆಹೊರೆ ಹಾಗೂ ಸರ್ಕಾರದ ಸಾಮೂಹಿಕ ಜವಾಬ್ದಾರಿಯಾಗಿದೆ. ಮಕ್ಕಳು ಪೂರ್ಣ ಸಾಮರ್ಥ್ಯದಲ್ಲಿ ಬೆಳೆಯಲು ಹಾಗೂ ತಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಪೂರಕವಾದ ವ್ಯವಸ್ಥೆ ಬೇಕಾಗುತ್ತದೆ ಎಂದವರು ತಿಳಿಸಿದ್ದಾರೆ.

ಮಾನಸಿಕ ಅನಾರೋಗ್ಯದ ಬಗ್ಗೆ ಕಳಂಕ ಹೊರಿಸಲಾಗಿದೆ. ಇದರಿಂದಾಗಿ ಕಡಿಮೆ ಜನರಷ್ಟೇ ಮಾನಸಿಕ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊರೊನಾ ಹಾಗೂ ಶಾಲೆಗಳನ್ನು ಮುಚ್ಚಿರುವುದು, ಸಾಮಾಜಿಕ ಒಂಟಿತನ ಹಾಗೂ ಹಿರಿಯರಲ್ಲಿ ಉಂಟಾಗಿರುವ ಉದ್ವಿಗ್ನತೆಗಳು ಮಕ್ಕಳಲ್ಲಿ ಸಮಸ್ಯೆಗಳನ್ನು ಹೆಚ್ಚಿಸಿವೆ. ಮಕ್ಕಳ ರಕ್ಷಣೆಗಾಗಿ ಸಾಮೂಹಿಕ ಪ್ರಯತ್ನ ನಡೆಸಬೇಕಿದೆ ಹಾಗೂ ಮಕ್ಕಳನ್ನು ಬೆಂಬಲಿಸುವ ವ್ಯವಸ್ಥೆ ರೂಪಿಸಬೇಕಿದೆ ಎಂದು ಪ್ರಭಾತ್ ಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಿಆರ್‌ವೈ - ಚೈಲ್ಡ್ ರೈಟ್ಸ್ ಅಂಡ್ ಯು ಸಂಘಟನೆಯ ನಿರ್ದೇಶಕಿ ಪ್ರೀತಿ ಮಹರ, ಕೊರೊನಾ ಆರಂಭದಿಂದಲೂ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ವಿಷಯವಾಗಿತ್ತು. ಕೇಂದ್ರ ಸರ್ಕಾರದ ಎನ್.ಸಿ.ಆರ್.ಬಿ. ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಮಕ್ಕಳ ಮನಸ್ಸಿನ ಮೇಲೆ ಅಪಾರ ಪರಿಣಾಮವಾಗಿರುವುದನ್ನು ತೋರಿಸುತ್ತದೆ ಎಂದಿದ್ದಾರೆ. ದೊಡ್ಡ ಸಂಖ್ಯೆಯ ಮಕ್ಕಳು ಬಡತನದ ಬೇಗೆಯಲ್ಲಿದ್ದು, ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗಿಲ್ಲ. ಇದು ಅವರ ಕಲಿಕೆಯ ಮೇಲೆ ಪರಿಣಾಮ ಬೀರಿದೆ. ಮತ್ತೊಂದೆಡೆ ಹಲವಾರು ಮಕ್ಕಳು ಅಂತರ್ಜಾಲಕ್ಕೆ ಅತಿಯಾಗಿ ತೆರೆದುಕೊಂಡಿದ್ದಾರೆ. ಅವರು ಆನ್‌ಲೈನ್ ಬೆದರಿಕೆ ಹಾಗೂ ಸೈಬರ್ ಅಪರಾಧಗಳಿಗೆ ಗುರಿಯಾಗಿದ್ದಾರೆ ಎಂದು ಪ್ರೀತಿ ಮೆಹರ ತಿಳಿಸಿದ್ದಾರೆ.

ಇವೆಲ್ಲದರ ಜೊತೆಗೆ ಭವಿಷ್ಯದ ಅನಿಶ್ಚಿತತೆ ಮಕ್ಕಳನ್ನು ಕಾಡುತ್ತಿದೆ. ಇದು ಯುವ ಮನಸ್ಸುಗಳನ್ನು ಘಾಸಿಗೊಳಿಸಿದೆ ಎಂದವರು ಹೇಳಿದ್ದಾರೆ.

# ಶತ್ರು ರಾಷ್ಟ್ರಗಳನ್ನು ಎದುರಿಸುವ ತಾಕತ್ತು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಇದೆ : ದಿನೇಶ್ ಶೆಟ್ಟಿ



ದಾವಣಗೆರೆ, ಅ.31- ಜಿಲ್ಲಾ ಕಾಂಗ್ರೆಸ್‌ನಿಂದ ಇಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮ ದಿನಾಚರಣೆ, ಇಂದಿರಾ ಗಾಂಧಿ ಪುಣ್ಯತಿಥಿಯನ್ನು ನಗರದ ವನಿತಾ ಸಮಾಜದ ಹಿರಿಯ ವನಿತೆಯರ ಆನಂದಧಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನಂತರ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ಪಾಕಿಸ್ತಾನ, ಚೀನಾ, ಬಾಂಗ್ಲಾದೇಶಗಳ ವಿರುದ್ಧ ಯುದ್ಧ ಮಾಡಲು ಕಾಂಗ್ರೆಸ್ ಪಕ್ಷದ ಸರ್ಕಾರದಿಂದ ಮಾತ್ರ ಸಾಧ್ಯ ಎಂಬುದನ್ನು ಮಾಜಿ ಪ್ರಧಾನಿ ಇಂದಿರಾಗಾಂಧಿಯವರು ತೋರಿಸಿಕೊಟ್ಟಿದ್ದಾರೆ ಎಂದರು.

ಈ ಹಿಂದೆ ನಮ್ಮ ಮಿತ್ರ ರಾಷ್ಟ್ರಗಳಂತೆ ನಟಿಸುತ್ತಿರುವ ಪಾಕಿಸ್ತಾನ, ಚೀನಾ ದೇಶಗಳು ಆಗಾಗ ದಾಳಿ ನಡೆಸುತ್ತಿದ್ದು, ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿದ್ದ ವೇಳೆ ತಕ್ಕ ಪ್ರತ್ಯುತ್ತರ ನೀಡಲಾಗುತ್ತಿತ್ತು. ಆದರೆ, ಇಂದು ರಾಜಕೀಯ ಲಾಭಕ್ಕೆ ದಾಳಿ ನಡೆಸಲಾಗುತ್ತಿದೆ ಎಂದು ದೂರಿದರು.

ಇಂದಿರಾ ಗಾಂಧಿಯವರು ಇಂದು ನಮ್ಮನ್ನು ಮರೆಯಾದ ದಿನ. ಆದರೆ, ಅವರು ಪಾಕಿಸ್ತಾನದ 7 ಸಾವಿರಕ್ಕೂ ಹೆಚ್ಚು ಸೈನಿಕ ಪ್ರಮುಖರನ್ನು ಬಂಧಿಸಿದ್ದನ್ನು ಈ ದೇಶದ ಜನ ಮರೆತಿಲ್ಲ. ಇಂದಿನ ಪ್ರಧಾನಿ ನಮ್ಮ ಸೈನಿಕರನ್ನು ಬಲಿಕೊಟ್ಟು ಅಧಿಕಾರದ ಚುಕ್ಕಾಣಿ ಹಿಡಿಯಲಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು.

ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ವಕ್ತಾರರಾದ ನಾಗರತ್ನಮ್ಮ, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್ ಮಾತನಾಡಿ, ಮಾಜಿ ಗೃಹಮಂತ್ರಿಗಳಾಗಿದ್ದ ದಿ|| ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇಶವನ್ನು ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಲ್ಲದೇ ದೇಶ ವಿರೋಧಿ, ಒಂದು ಜಾತಿ - ಧರ್ಮದ ಸಂಘಟನೆಗಳನ್ನು ಬೆಂಬಲಿಸಲಿಲ್ಲ ಎಂದು ತಿಳಿಸಿದರು.

ಮಾಜಿ ಪ್ರಧಾನ ಮಂತ್ರಿಗಳಾದ ದಿ|| ಇಂದಿರಾ ಗಾಂಧಿಯವರು ದೇಶದ ಬಡತನ ನಿರ್ಮೂಲನೆಗಾಗಿ 20 ಅಂಶಗಳ ಕಾರ್ಯಕ್ರಮವನ್ನು ತರುವ ಮೂಲಕ ಈ ದೇಶದ ಎಲ್ಲಾ ವರ್ಗಗಳಿಗೆ ಅನುಕೂಲ ಮಾಡಿಕೊಟ್ಟು ಅವರ ಆಡಳಿತವನ್ನು ವಿಪಕ್ಷಗಳು ಹೊಗಳುವಂತೆ ಮಾಡಿದ್ದರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಚ್.ಜಯಣ್ಣ, ಮಹಿಳಾ ಕಾಂಗ್ರೆಸ್‌ನ ಶುಭಮಂಗಳ, ರಾಜೇಶ್ವರಿ, ದ್ರಾಕ್ಷಾಯಣಮ್ಮ, ರುದ್ರಮ್ಮ, ಸುನಿತಾ ಭೀಮಣ್ಣ, ಜಯಮ್ಮ, ಹರೀಶ್ ಕೆ.ಎಲ್.ಬಸಾಪುರ, ಕೊಡಪಾನ ದಾದಾಪೀರ್, ಡಿ.ಶಿವಕುಮಾರ್, ಮಂಜುನಾಥ್, ಅಲೆಕ್ಸಾಂಡರ್ (ಜಾನ್) ಸೈಯದ್ ಬಾಷಾ, ಸಿದ್ದೇಶ್, ಮೊಟ್ಟೆ ದಾದಾಪೀರ್, ಯುವರಾಜ್ ಮತ್ತಿತರರಿದ್ದರು.

## ಜೈಡಸ್ ಕ್ಯಾಡಿಲಾ ಲಸಿಕೆ ಬೆಲೆ 265 ರೂ.ಗೆ ಇಳಿಕೆ

**(1ನೇ ಪುಟದಿಂದ)** ರೂ.ಗಳ ದರ ನಿಗದಿಗೆ ಪ್ರಸ್ತಾಪಿಸಿತ್ತು. ಆದರೆ, ಚರ್ಚೆಗಳ ನಂತರ 358 ರೂ.ಗಳಿಗೆ ಇಳಿಕೆ ಮಾಡಲು ಸಮ್ಮತಿಸಲಾಗಿದೆ. ಇದರಲ್ಲಿ ಲಸಿಕೆ ನೀಡುವ ಉಪಕರಣದ ವೆಚ್ಚವೂ ಸೇರಿದೆ ಎಂದು ಮೂಲಗಳು ತಿಳಿಸಿವೆ.

ಮೂರು ಡೋಸ್‌ಗಳ ಲಸಿಕೆಯನ್ನು 28 ದಿನಗಳ ಅಂತರದಲ್ಲಿ ನೀಡಬೇಕಿದೆ. ಡಿ.ಎನ್.ಎ. ಆಧರಿತ ಲಸಿಕೆಯನ್ನು ದೇಶೀಯವಾಗಿ ರೂಪಿಸಲಾಗಿದೆ. ಆಗಸ್ಟ್ 20ರಂದು ಈ ಲಸಿಕೆಗೆ ಅನುಮತಿ ನೀಡಲಾಗಿತ್ತು.

## ಮಹಿಳಾ ಕಾಂಗ್ರೆಸ್‌ನಿಂದ ರಕ್ತದಾನ ಶಿಬಿರ



ದಾವಣಗೆರೆ, ಅ.31- ಜಿಲ್ಲಾ ಮಹಿಳಾ ಕಾಂಗ್ರೆಸ್‌ನಿಂದ ಇಂದು ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಪುಣ್ಯತಿಥಿ ಅಂಗವಾಗಿ ರಕ್ತದಾನ ಶಿಬಿರವನ್ನು ಬಾಪೂಜಿ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ಬಾಯಿ ಮಾಲತೇಶ್ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷೆ ರಾಜೇಶ್ವರಿ ರಕ್ತದಾನ ಮಾಡುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ವಿಪಕ್ಷ ನಾಯಕ ಎ.ನಾಗರಾಜ್, ಬ್ಲಾಕ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಿಳಾ ಕಾಂಗ್ರೆಸ್‌ನ ಶುಭಮಂಗಳ, ನಾಗರತ್ನಮ್ಮ, ಸುನಿತಾ, ಮಂಗಳಮ್ಮ, ಸಲ್ಮಾ ಬಾನು, ರುದ್ರಮ್ಮ, ಇಂದ್ರಮ್ಮ, ರೇಖಾ, ಮಂಜಕ್ಕ, ರತ್ನ, ಗೌರಮ್ಮ, ಮಂಜುಳಾ, ಗಿರಿಜಮ್ಮ, ದ್ರಾಕ್ಷಾಯಣಮ್ಮ ಸಾಮಾಜಿಕ ಜಾಲತಾಣದ ಹರೀಶ್ ಕೆ.ಎಲ್. ಬಸಾಪುರ, ಕೊಡಪಾನ ದಾದಾಪೀರ್, ಸಿದ್ದೇಶ್ ಮತ್ತಿತರರಿದ್ದರು.

## ಸಿಎಂ ನೇತೃತ್ವದಲ್ಲಿ ಮುಂದಿನ ಚುನಾವಣೆ : ಸೋಮಣ್ಣ

ಬೆಂಗಳೂರು, ಅ. 31 – ಮುಂದಿನ ಚುನಾವಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಎದುರಿಸಲಾಗುವುದು ಎಂದಿರುವ ವಸತಿ ಸಚಿವ ವಿ. ಸೋಮಣ್ಣ, ಬೊಮ್ಮಾಯಿ ಅವರೇ ಮುಂದಿನ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂಬ ಇಂಗಿತ ವ್ಯಕ್ತಪಡಿಸಿದ್ದಾರೆ. ನಗರಕ್ಕೆ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2023ರಲ್ಲಿ ಮತ್ತೆ ಅಧಿಕಾರ ಹಿಡಿಯಲು ಕಾರ್ಯೋನ್ಮುಖರಾಗಿದ್ದೇವೆ. ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ ಎಂದರು.

ಇತ್ತೀಚೆಗೆ ನಡೆದ ಹಾನಗಲ್ ಹಾಗೂ ಸಿಂಧಗಿ ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದೆ ಎಂದವರು ಇದೇ ಸಂದರ್ಭದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು. ಬೆಂಗಳೂರು ಜಿಲ್ಲಾ ಉಸ್ತುವಾರಿ ಕುರಿತಂತೆ ಸಚಿವ ಆರ್.ಅಶೋಕ್ ಜೊತೆ ಯಾವುದೇ ಭಿನ್ನಮತವಿಲ್ಲ. ಮುಖ್ಯಮಂತ್ರಿ ಬೊಮ್ಮಾಯಿ ಅವರು ಪರಮಾಧಿಕಾರ ಹೊಂದಿದ್ದು, ಅವರೇ ಉಸ್ತುವಾರಿ ಆಯ್ಕೆ ಮಾಡಲಿದ್ದಾರೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.


### ಶ್ರೀಮತಿ ನಾಗಮ್ಮ ಪಿಸಾಳೆ ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್ ಕುವೆಂಪುನಗರ 7ನೇ ಕ್ರಾಸ್ ವಾಸಿ ಲೇ. ಗಣೇಶರಾವ್ ಪಿಸಾಳೆ ಇವರ ಧರ್ಮಪತ್ನಿ

**ಶ್ರೀಮತಿ ನಾಗಮ್ಮ ಪಿಸಾಳೆ** (50)

ಇವರು ದಿ.31.10.2021ರ ಭಾನುವಾರ ಸಂಜೆ 7 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.11.2021ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ: ಮೊ: 99018 28555**

### ಮಲೇಬೆನ್ನೂರು ಪಟ್ಟಣದ ಉಡೇದರ ನಿಂಗಪ್ಪ ನಿಧನ



ಮಲೇಬೆನ್ನೂರು ಪಟ್ಟಣದ ವಾಸಿ ಹಾಗೂ ಶ್ರೀ ಬಸವೇಶ್ವರ ಮತ್ತು ಶ್ರೀ ಕಲ್ಲೇಶ್ವರ ದೇವಸ್ಥಾನದ ಮಾಜಿ ಕನ್ವೀನಿಯರ್ ಉಡೇದರ ನಿಂಗಪ್ಪ (76 ವರ್ಷ) ಇವರು ದಿ.31.10.2021ರ ಭಾನುವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.11.2021ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ.


### ಚಿಕ್ಕಮಗಳೂರಿನ ಕೆ.ಎಸ್ ವಿಶ್ವನಾಥ್ ನಿಧನ



ಚಿಕ್ಕಮಗಳೂರಿನ ಕೋಟೆ ಚನ್ನಾಪುರ ನಿವಾಸಿ ಕೆ.ಎಸ್. ವಿಶ್ವನಾಥ್ (80) ಇವರು ದಿನಾಂಕ 29.10.2021ರ ಶುಕ್ರವಾರ ರಾತ್ರಿ 10.15ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.10.2021ರ ಶನಿವಾರ 1.30ಕ್ಕೆ ಬೆಂಗಳೂರಿನ ವೀರಶೈವ ರುದ್ರಭೂಮಿ ಕನ್ನಳ್ಳಿಯಲ್ಲಿ ನೆರವೇರಿತು.

|| ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ತಾಲ್ಲೂಕು ಕೆರೆಯಾಗಳಹಳ್ಳಿ ಗ್ರಾಮದ ವಾಸಿ

**ಶ್ರೀ ಹಾಲಪ್ಪ** ನಿವೃತ್ತ ಕೆ.ಪಿ.ಟಿ.ಸಿ.ಎಲ್ ಇಂಜಿನಿಯರ್

ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ 17.10.2021ನೇ ಭಾನುವಾರ ಸಂಜೆ 6 ಗಂಟೆಗೆ ನನ್ನ ಸಹೋದರ

**ಶ್ರೀ ಎ.ಕೆ. ನಾಗಪ್ಪನವರು**

**(ಮಂಡಲ ಪಂಚಾಯಿತಿ ಮಾಜಿ ಸದಸ್ಯರು)**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ ಯನ್ನು**

**ದಿನಾಂಕ 1.11.2021ನೇ ಸೋಮವಾರ ಮಧ್ಯಾಹ್ನ 12.05ಕ್ಕೆ ಶ್ರೀಮತಿ ಪಾರ್ವತಮ್ಮ ಡಾ|| ಶಾಮನೂರು ಶಿವಶಂಕರಪ್ಪ ಸಮುದಾಯ ಭವನ ಶ್ರೀ ಈಶ್ವರ ಪಾರ್ವತಿ, ಗಣಪತಿ ದೇವಸ್ಥಾನ ಪಕ್ಕ, 3ನೇ ಬಸ್ ಸ್ಟಾಪ್ ಹತ್ತಿರ, ವಿದ್ಯಾನಗರ,** ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು

**ಶ್ರೀ ಹಾಲಪ್ಪ,** ನಿವೃತ್ತ ಕೆ.ಪಿ.ಟಿ.ಸಿ.ಎಲ್. ಸಹಾಯಕ ಕಾರ್ಯಪಾಲಕ ಅಭಿಯಂತರರು,

**ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,** ತರಳಬಾಳು ಬಡಾವಣೆ, ದಾವಣಗೆರೆ.


**ಶ್ರೀಮತಿ ಗೌರಮ್ಮ ಶ್ರೀ ಶಿವಮೂರ್ತಿ ಕೆ.ಎನ್.,**

ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹರಿಹರ.

**ಹುಚ್ಚಂಗೆವ್ವ ವಂಶಸ್ಥರು ಕೆರೆಯಾಗಳಹಳ್ಳಿ ಹಾಗೂ ಬಂಧು-ಮಿತ್ರರು.**

**ಮೊ: 94498 09621, 63637 23531**


### ಪುಣ್ಯಸ್ಮರಣೆ



**ದಿ. ಪಿ.ಕೆ. ಕಲಬುರ್ಗಿ**

ಲೆಕ್ಕ ಪರಿಶೋಧಕರು ಮತ್ತು ತೆರಿಗೆ ಸಲಹೆಗಾರರು

ಜನನ: 17.10.1927 ನಿಧನ: 22.07.2014



**ದಿ. ಶ್ರೀಮತಿ ರುಕ್ಮಿಣಿ ಪಿ. ಕಲಬುರ್ಗಿ**

ಜನನ.5.7.1930 ನಿಧನ: 1.11.2020

ನೀವುಗಳು ನಮ್ಮಿಂದ ಭೌತಿಕವಾಗಿ ದೂರವಾದರೂ, ನಿಮ್ಮಗಳ ನೆನಪು ಸದಾ ಹಚ್ಚ ಹಸಿರಾಗಿದೆ. ನಿಮ್ಮ ಆದರ್ಶದ ಜೀವನ ನಮಗೆ ಸದಾ ಸ್ಫೂರ್ತಿಯಾಗಿದ್ದು, ನೀವು ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಮಕ್ಕಳಾದ : **ಅಶೋಕ್ ಪಿ. ಕಲಬುರ್ಗಿ ಮತ್ತು ಶ್ರೀಮತಿ ಅನುರಾಧ, ಪ್ರಮೋದ್ ಪಿ. ಕಲಬುರ್ಗಿ ಮತ್ತು ಶ್ರೀಮತಿ ಅಂಜಲಿ**

ಮೊಮ್ಮಕ್ಕಳು : **ಸೋನಲ್ ಮತ್ತು ಸಮೀರ್ ಎ. ಕಲಬುರ್ಗಿ ದೇವಯಾನಿ ದಿನೇಶ್ ಸೋಳಂಕಿ, ಗಿರೀಶ್ ಮತ್ತು ಅಶ್ವಿನಿ ಕಲಬುರ್ಗಿ, ಉಮಾ ರಜತ್ ಭೂತೆ**

ಮರಿ ಮೊಮ್ಮಕ್ಕಳು : **ವಿರಾಜ್ ದಿನೇಶ್ ಸೋಳಂಕಿ, ಆರ್ಯಮನ್ ಗಿರೀಶ್ ಕಲಬುರ್ಗಿ, ಆರ್ವಿ ಗಿರೀಶ್ ಕಲಬುರ್ಗಿ , ದಿಯಾ ರಜತ್ ಭೂತೆ, ನೀಲಾ ಮತ್ತು ದಹರಾ ಓಹರಿ.**


# ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಖಚಿತ

### ಜಗಳೂರಿನಲ್ಲಿ ಸತೀಶ್ ಜಾರಕಿಹೊಳಿ ವಿಶ್ವಾಸ

ಜಗಳೂರು, ಅ.31- ರಾಜ್ಯದಲ್ಲಿನ ಸಿಂಧಗಿ, ಹಾನಗಲ್ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಖಚಿತವಾಗಿದ್ದು, ಮುಂಬರುವ ಚುನಾವಣೆಗಳಿಗೆ ದಿಕ್ಸೂಚಿಯಾಗಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಸತೀಶ್ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಇಂದಿರಾಗಾಂಧಿ ಅವರ 37ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ನಂತರ ಅವರು ಮಾತನಾಡಿದರು.

ಇಂದಿರಾಗಾಂಧಿ ಅವರ ಆದರ್ಶಗಳು ಹಾಗೂ ಪಕ್ಷ ಸಂಘಟನೆಯ ಚತುರತೆ ಇಂದಿಗೂ ಜೀವಂತವಾಗಿದೆ. ದೇಶಕ್ಕೆ ನೀಡಿದ ಕೊಡುಗೆ ಅಪಾರವಾಗಿದ್ದು, ಆದರ್ಶಗಳನ್ನು ಮೈಗೂಡಿಸಿಕೊಂಡು ರಾಜ್ಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷ ಬಲವರ್ಧನೆಗೊಳಿಸಿ, ಮುಂಬರುವ ಚುನಾವಣೆಗಳಿಗೆ ಸಜ್ಜಾಗಬೇಕು ಎಂದು ಕರೆ ನೀಡಿದರು.

ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ಅಸಗೋಡು ಜಯಸಿಂಹ ಮಾತನಾಡಿ, ಇಂದಿರಾ ಗಾಂಧಿ ಅವರ ಸಾಮಾಜಿಕ ಕಳಕಳಿ ಶೋಷಿತ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದರು.

ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಮಾತನಾಡಿ, ಮಾನವ ಬಂಧುತ್ವ ವೇದಿಕೆಯ ಮುಖಾಂತರ ಸಮಾಜವನ್ನು ಜಾಗೃತಿಗೊಳಿಸುತ್ತಿರುವ ಮಾನ್ಯ ಸತೀಶ್ ಜಾರಕಿಹೊಳಿ ಅವರ ಚಿಂತನೆಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಇಂದು ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿರುವುದು ಪುಣ್ಯದ ದಿನವಾಗಿದೆ ಎಂದರು.

ಕಳೆದ ವಿಧಾನ ಸಭಾ ಚುನಾವಣೆಗಳಲ್ಲಿ ಪಕ್ಷದ ಅಭಿವೃದ್ಧಿ ಕೆಲಸಗಳ ಪ್ರಚಾರದ ಕೊರತೆಯಿಂದ ಸೋಲು ಅನುಭವಿಸುವಂತಾಯಿತು. ಇದೀಗ ದೇಶದಲ್ಲಿನ ಬಿಜೆಪಿ ಆಡಳಿತದಿಂದ ಜನಸಾಮಾನ್ಯರ ಬದುಕು ದುಸ್ತರವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಕೆಪಿಸಿಸಿ ಎಸ್.ಟಿ ಘಟಕದ ರಾಜ್ಯ ಅಧ್ಯಕ್ಷ ಕೆ.ಪಿ.ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಮಂಜುನಾಥ್, ಷಂಷೀರ್ ಅಹಮ್ಮದ್, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ರವಿ ಗುಜ್ಜರ್, ತಿಪ್ಪೇಸ್ವಾಮಿ ಗೌಡ, ಶೇಖರಪ್ಪ, ಭೈರೇಶ್, ಪ್ರಕಾಶ್ ರೆಡ್ಡಿ, ರೇವಣ್ಣ, ಕುಬೇಂದ್ರಪ್ಪ, ಬಿ. ಲೋಕೇಶ್, ಮಹಿಳಾ ಕಾಂಗ್ರೆಸ್‌ನ ಕೆಂಚಮ್ಮ, ಸಾವಿತ್ರಮ್ಮ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

## ಇಂದು 'ಕನ್ನಡ ಕೌಸ್ತುಭ' ರಾಜ್ಯ ಪ್ರಶಸ್ತಿ ಪ್ರದಾನ

ಕಲಾಕುಂಚ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.35 ಕ್ಕೆ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ 'ಕನ್ನಡ ಕೌಸ್ತುಭ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಹಿರಿಯ ಗಾಯಕಿ ಇಂದೂ ವಿಶ್ವನಾಥ್ ಅಧ್ಯಕ್ಷತೆ ವಹಿಸುವರು. ಡಿವಿಜಿ ಕಗ್ಗಯಾನ ಸಂಯೋಜಕರಾದ ಡಾ. ರೋಹಿಣಿ ಮೋಹನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಲಾಕುಂಚ ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರ್, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಅಧ್ಯಕ್ಷ ಡಿ.ಎಸ್. ಪ್ರಶಾಂತ್, ಕಾರ್ಯದರ್ಶಿ ಡಿ.ಎಸ್. ಹೇಮಂತ್ ಭಾಗವಹಿಸಲಿದ್ದಾರೆ.

## ಕಸಾಪ ಗ್ರಾಮೀಣ ಸಿರಿ ಪ್ರಶಸ್ತಿ



ಜಗಳೂರು, ಅ.31- ಸೂಲಗಿತ್ತಿ ಹಾಗೂ ನಾಟಿ ವೈದ್ಯೆ ಸುಲ್ತಾನಿಬೀ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಗೆ ಭಜನರಾಗಿರುವ ಈ ಸಂದರ್ಭದಲ್ಲಿ ತಾಲ್ಲೂಕು ಕಸಾಪ ಅಧ್ಯಕ್ಷ ಹಜರತ್ ಅಲಿ ಅವರು ಗೌರವಿಸಿದರು.

## ನಾ ಕಂಡ ನನ್ನ ಕರುನಾಡು

ಹೇಗೆ ವರ್ಣಿಸಲಿ ನಾ ನನ್ನ ಕರುನಾಡನ್ನ
ಅದೆಷ್ಟು ಸುಂದರ
ಪಶ್ಚಿಮ ಘಟ್ಟದ ದಾರಿಯಲಿ
ಕಾಣುತಿಹ ನೀ ನಿಜ ಸ್ವರ್ಗವಾ
ಕಾವೇರಿ, ತುಂಗೆ, ಭದ್ರೆ ಇನ್ನೂ
ಅನೇಕ ನದಿಗಳು ಉದ್ಭವಿಸುವ ಮೂಲವಿದು
ಹೇಗೆ ವರ್ಣಿಸಲಿ ನಾ
ನನ್ನ ಕರುನಾಡನ್ನ

ಶಾಸನ ಬದ್ದವಾದ ಭಾಷೆ ನಮ್ಮದು
ಸಿರಿಸಂಪತ್ತು ನಾಡು ನಮ್ಮದು
ಕವಿ ಸಾಹಿತಿಗಳ ತವರೂರಿದು
ಮೈಸೂರು ಅರಸರು ಆಳಿದ ನಾಡಿದು
ಮುತ್ತುರತ್ನಗಳನ್ನು ಬೀದಿಯಲಿ ಮಾರುತ್ತಿದ್ದ ಬೀಡಿದು
ಅನೇಕ ಶಿಲ್ಪಕಲೆಯುಳ್ಳ ಪುಣ್ಯ ಭೂಮಿಯಿದು
ಹೇಗೆ ವರ್ಣಿಸಲಿ ನಾ
ನನ್ನ ಕರುನಾಡನ್ನ

ಬಸವಣ್ಣನವರಂತಹ ವಚನಕಾರರು
ಅಕ್ಕಮಹಾದೇವಿಯಂತಹ ಶಿವಶರಣೆ
ವಿಶ್ವೇಶ್ವರಯ್ಯನವರಂತಹ ಅಭಿಯಂತರರು
ಸಿ.ವಿ. ರಾಮನ್ ರಂತಹ ವಿಜ್ಞಾನಿಗಳು
ಕುವೆಂಪು, ದ.ರಾ. ಬೇಂದ್ರ, ಕಂಬಾರರಂತಹ ಕವಿಗಳು
ಡಾ.ರಾಜಕುಮಾರ್, ಶಂಕರ್ ನಾಗ್,
ವಿಷ್ಣುವರ್ಧನ್‌ರಂತಹ ಮೇರುನಟರು
ಇನ್ನೂ ಅನೇಕ ಮಹಾನ್ ವ್ಯಕ್ತಿಗಳು ಹುಟ್ಟಿ
ಬೆಳೆದಂತಹ ನಾಡಿದು
ಹೇಗೆ ವರ್ಣಿಸಲಿ ನಾ
ನನ್ನ ಕರುನಾಡನ್ನ



**- ಮನುಸ್ವಾಮಿ ಹಿರೇಮಠ್,**
ಪ್ರಥಮ ಪಿಯುಸಿ,
ಪುಷ್ಪಾ ಮಹಾಲಿಂಗಪ್ಪ
ಕಾಲೇಜು, ದಾವಣಗೆರೆ.


Eswar Digitronics
SINCE 1951
Eswar's Diwali Mega Offers
70 YEARS OF TRUST
INSTANT ADDITIONAL CASHBACK UPTO 25%*
FREE HOME DELIVERY
ZERO INTEREST
EXCLUSIVE OFFERS
CASH BACK UPTO 10,000/-
ZERO DOWNPAYMENT
1 EMI FREE
29th OCTOBER TO 07th NOVEMBER 2021
SONY OLED 65" MODEL NO - XR65A80J STARTS FROM - 2,55,000/-* INSTANT CASH BACK UPTO 20,000/-
SAMSUNG FREE SOUND BAR WORTH Rs 33,000/-* 75" MODEL NO - 75AU8000 STARTS FROM - 1,10,990/-* INSTANT CASH BACK UPTO 9000/-
LG OLED 55" MODEL NO - OLED 55B1PTZ STARTS FROM - 1,75,990/-* INSTANT CASH BACK UPTO 12,000/-
SONY 75" MODEL NO - 75X80J STARTS FROM - 1,80,000/-* INSTANT CASH BACK UPTO 10,000/-
Haier 75" MODEL NO - 75K6600HQGA STARTS FROM - 1,39,900/-* INSTANT CASH BACK UPTO 10,000/-
SAMSUNG FAMILY HUB 700 LTR SIDE BY SIDE INSTANT CASH BACK UPTO 12,000/- + GIFT STARTS FROM - 76,120/-*
BOSCH 658 LTR INSTANT CASH BACK UPTO 10,000/- + GIFT STARTS FROM - 72,990/-*
LG 687 LTR INSTANT CASH BACK UPTO 9,000/- + GIFT STARTS FROM - 86,500/-*
Haier 578 LTR INSTANT CASH BACK UPTO 6,000/- + GIFT STARTS FROM - 59,900/-*
Godrej 810 LTR INSTANT CASH BACK UPTO 2,000/- + GIFT STARTS FROM - 19,900/-*
SAMSUNG FRONT LOAD W/M 8 KG INSTANT CASH BACK UPTO 9,000/- STARTS FROM - 38,000/-*
BOSCH 9 KG INSTANT CASH BACK UPTO 7,000/- STARTS FROM - 46,900/-*
LG 8 KG INSTANT CASH BACK UPTO 9,000/- STARTS FROM - 38,500/-*
BOSCH 6.5 KG INSTANT CASH BACK UPTO 3,000/- STARTS FROM - 17,000/-*
Whirlpool 6.5 KG INSTANT CASH BACK UPTO 2,000/- STARTS FROM - 15,300/-*
SAMSUNG 192 LTR CASH BACK AVAILABLE + GIFT STARTS FROM - 12,690/-*
LG 190 LTR CASH BACK AVAILABLE + GIFT STARTS FROM - 13,900/-*
Whirlpool 190 LTR CASH BACK AVAILABLE + GIFT STARTS FROM - 14,900/-*
Godrej 190 LTR CASH BACK AVAILABLE + GIFT STARTS FROM - 12,900/-*
Haier 190 LTR CASH BACK AVAILABLE + GIFT STARTS FROM - 12,900/-*
BOSCH CHIMNY HOB + STARTS FROM - 35,000/-*
FABER CHIMNY HOB + STARTS FROM - 22,000/-*
SAMSUNG LG Godrej STARTS FROM - 4,999/-*
morphy richards smart ideas for your home BAJAJ STARTS FROM - 3,999/-*
LLOYD MITSUBISHI ELECTRIC Cooling and Heating Solutions DAIKIN STARTS FROM - 23,999/-* + FREE INSTALLATION
PHILIPS UPTO 15% OFF APPLIANCES
PHILIPS BOSCH Preethi BAJAJ Panasonic ideas for life UPTO 40% OFF MIXER GRINDER
BAJAJ Prestige UPTO 40% OFF WET GRINDER
WATER PURIFIER KENT EUREKA FORBES BLUE STAR UPTO 25% OFF
COOKWARE COOKER UPTO 25% OFF TAVA
*T&C APPLY
SONY SAMSUNG BOSCH Haier LG Whirlpool Godrej IFB PHILIPS KENT EUREKA FORBES FABER
Eswar Digitronics
Eswar
SRI MARULASIDDESHWARA COMPLEX NH-13, NEAR BUS-STAND
CHANNAGIRI - +91 90086 63411
# 8 & 9, SRI MURUGARAJENDRA COMPLEX,
OPP. JAYADEVA PETROL BUNK, HADADI ROAD,
DAVANGERE - 08192 253411 | +91 90088 33411

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಬೇಕರಿ ಮಾರಾಟಕ್ಕಿದೆ / ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ ಉತ್ತಮವಾಗಿ ವ್ಯಾಪಾರವಾಗುತ್ತಿರುವ ಬೇಕರಿ ಮಾರಾಟಕ್ಕಿದೆ. ಬೇಕರಿಯ ಎಲ್ಲಾ ಪದಾರ್ಥಗಳನ್ನು ಮಾಡುವವರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
ಮೊ. 81235-16806

ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು, ಮನೆಗಳು ಮಾರಾಟಕ್ಕಿವೆ.
30×40 North ಮನೆ 35 ಲಕ್ಷಕ್ಕೆ, 40×60 East, 40×60 West, 30×50 South, 30×50 West,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಹಾಲ್ ಬಾಡಿಗೆ ಇದೆ**
ನಿಜಲಿಂಗಪ್ಪ ಬಡಾವಣೆ ಮುಖ್ಯರಸ್ತೆ, 17×60=1020 Sq ft ಗ್ರೌಂಡ್‌ಫ್ಲೋರ್ Attch Bathroom ಇದೆ. ಆಫೀಸ್, ಬ್ಯಾಂಕ್, ಕ್ಲಿನಿಕ್, ಡ್ಯಾನ್ಸ್ ಕ್ಲಾಸ್, ಶೋ ರೂಮ್ಸ್.
94482 33844

**WANTED**
Analytical Chemist to handle Laboratory (HPLC, GC, AAS,etc), Experienced Tally operating, Lady Accountant needed for reputed company.
**Rigved Scientific Organics Davanagere.**
Whatsapp Resume and Call
99863 66358

**ಮನೆ ಮಾರಾಟಕ್ಕಿದೆ**
ಡಿ.ಸಿ.ಎಂ. ಟೌನ್‌ಶಿಪ್‌ನ 4ನೇ ಬಿ ಕ್ರಾಸ್‌ನಲ್ಲಿ ಕಟ್ಟಿಸಿರುವ 30x40 ಅಡಿಗಳ ಅಳತೆಯ ಶ್ರೀ ವಿನಾಯಕ ಕೃಪ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
70224 60467

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
**ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್ಸ್**
# 24, RMC ಲಿಂಕ್ ರಸ್ತೆ, ವಿನಾಯಕ ಟಾಕೀಸ್ ಹತ್ತಿರ, ಆನೆಕೊಂಡ, ಬಂಬೂ ಬಜಾರ್, ದಾವಣಗೆರೆ-577001
98800 05777, 63644 46777

**ಕೆಲಸಕ್ಕೆ ಬೇಕಾಗಿದ್ದಾರೆ**
ಇಂಗ್ಲಿಷ್ ಓದಬಲ್ಲ SSLC ಪಾಸ್/ಫೇಲಾದ ಹುಡುಗ/ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ.
**ರಾಜ ಹೋಮಿಯೋಪತಿಕ್ ಮೆಡಿಕಲ್ ಸೆಂಟರ್**
AVK ಕಾಲೇಜು ರಸ್ತೆ, ವಾಸನ್ ಐ ಕೇರ್ ಪಕ್ಕ, ಟೈಟನ್ ಐ ಪ್ಲಸ್ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ.

ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ.
30×50 East, 40 ಅಡಿ ರೋಡಿಗಿದೆ. 30×50 West, 30×40, 30×40 East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.Sc, B.Ed, B.Com, M.Com, M.Sc, any Degree. English Teacher's Salary: 8,000 to 10,000, Address: **Little Champs Gurukulam,** Near HKR Circle College Road Nittuvalli, Davangere
90609 06039, 98443 32559

**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತೀಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642

**ಬೇಕಾಗಿದ್ದಾರೆ**
ಯುವಕರು/ಯುವತಿಯರು Marketing Excutive (2 years experience) Tele Caller (1 year experience) ಆಗಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
63644 69938

**HOUSE FOR RENT**
Independant 1 BHK house for rent. Narasaraj Road, Davangere.
70199 88456
(Only for Vegetariance)

**ಲೆಕ್ಚರರ್ಸ್ ಬೇಕಾಗಿದ್ದಾರೆ**
1. ಬಿ.ಇ.,/ಎಂ.ಟೆಕ್, (From all Branches)
2. ಎಂ.ಎಸ್ಸಿ., (Physics, Biology, Maths)
**ಸಮೃದ್ಧಿ ಕೋಚಿಂಗ್ ಅಕಾಡೆಮಿ**
63646 40296

**FOR RENT**
3 BHK, 1st Floor, 5th Cross, BIET Main Road, Anjaneya Badavane, Davangere.
87926 62162
91084 40500

**WANTED**
for Dry fruits shop
**Sales Boys**
**Billing Staff** (Ladies) with computer knowledge
94484 54709
99007 08999

**ಶಿಕ್ಷಕಿಯರು ಬೇಕಾಗಿದ್ದಾರೆ**
PUC/BA-NTC- 4, D.Ed/ B.Ed- 4
**ಜ್ಞಾನದೀಪ ಪಬ್ಲಿಕ್ ಸ್ಕೂಲ್,** 60 ಅಡಿ ರಿಂಗ್ ರೋಡ್ ನಿಟುವಳ್ಳಿ, ದಾವಣಗೆರೆ.
89710 18943
94496 79346

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಹಾಗೂ ಸರ್ಕಾರಿ ಕೆಲಸಕ್ಕೆ ಉಪಯೋಗ SSLC/PUC, NTC ತರಬೇತಿ ಪಡೆಯಲು ಮಹಿಳಾ ಅಭ್ಯರ್ಥಿಗಳಿಗೆ ಸಂಪರ್ಕಿಸಲು ಕೋರಿದೆ. ವಿದ್ಯಾರ್ಹತೆ: SSLC ಪಾಸ್ ಅಥವಾ PUC/BA ಪಾಸ್ ಅಥವಾ ಫೇಲ್. **ಶಾರದಾ ಕರೆಸ್ಪಾಂಡೆನ್ಸ್ ಕಾಲೇಜ್,** 60 ಅಡಿ ರಿಂಗ್ ರಸ್ತೆ, ನಿಟುವಳ್ಳಿ, ದಾವಣಗೆರೆ.
94496 79346, 89710 18943

**SHOPS FOR RENT**
(with wash Room Facility)
N.R. Road, Davangere.
94483 69523

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ನೇತ್ರದಾನ ಶ್ರೇಷ್ಠದಾನ**


# ಪುನೀತ್ ಚಿರನಿದ್ರೆಗೆ

(1ನೇ ಪುಟದಿಂದ) ಅಂತ್ಯಕ್ರಿಯೆ ನೆರವೇರಿಸಿದರು.

ಪುನೀತ್ ಅವರ ಪತ್ನಿ ಅಶ್ವಿನಿ ರೇವಂತ್, ಮಕ್ಕಳಾದ ಧೃತಿ ಹಾಗೂ ವಂದಿತ, ಅಣ್ಣಂದಿರಾದ ಶಿವರಾಜಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಕುಟುಂಬದ ಸದಸ್ಯರು ಅಂತ್ಯ ಕ್ರಿಯೆಯಲ್ಲಿ ಭಾವುಕ ವಿದಾಯ ಹೇಳಿದರು. ನಿಗದಿಗಿಂತ ಸಾಕಷ್ಟು ಮುಂಚೆ ಬೆಳಗಿನ ಜಾವವೇ ಅಂತ್ಯಕ್ರಿಯೆ ನೆರವೇರಿಸಲಾಯಿತಾದರೂ, ನೂರಾರು ಅಭಿಮಾನಿಗಳು ಕಂಠೀರವ ಕ್ರೀಡಾಂಗಣದ ಮುಂದೆ ನೆರೆದಿದ್ದರು ಹಾಗೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.


**ಮನೆ ಬಾಡಿಗೆಗೆ, ಸೈಟ್ ಮಾರಾಟಕ್ಕೆ**
ಆಂಜನೇಯ ಬಡಾವಣೆ 18ನೇ ಕ್ರಾಸ್ ನೆಲ ಮಹಡಿಯಲ್ಲಿ ಬೋರ್‌ವೆಲ್ ಸೌಲಭ್ಯವಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ). ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಅಕ್ಕಪಕ್ಕ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೊ. 98441-25262

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. PUC or any Degree,
**ವಿಳಾಸ: ಕಾವೇರಿ ಫಾರ್ಮ,** ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ- 577002

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ **ವಿಳಾಸ:** ಕಿರಣ್ ಎಂಟರ್‌ಪ್ರೈಸಸ್, 4ನೇ ಮೇನ್, 1ನೇ ಕ್ರಾಸ್, ವಿನೋಬ ನಗರ, ದಾವಣಗೆರೆ.
94826 71264


# ಕೊಕ್ಕನೂರು : ಹೆಲಿಕ್ಯಾಪ್ಟರ್ ನೋಡಲು ಮುಗಿಬಿದ್ದ ಜನ ; ಪೊಲೀಸರಿಂದ ನಿಯಂತ್ರಣ





ಮಲೇಬೆನ್ನೂರು, ಅ.31- ಕೊಕ್ಕನೂರು ಗ್ರಾಮಕ್ಕೆ ಇದೇ ಮೊದಲ ಬಾರಿಗೆ ಬಂದಿಳಿದ ಹೆಲಿಕ್ಯಾಪ್ಟರ್ ನೋಡಲು ಜನ ಮುಗಿಬಿದ್ದಿದ್ದರು. ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟ ಘಟನೆಯೂ ನಡೆಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷರೂ, ಮಾಜಿ ಸಚಿವರೂ ಆದ ಶಾಸಕ ಸತೀಶ್ ಜಾರಕಿಹೊಳಿ ಅವರು ಹೆಲಿಕ್ಯಾಪ್ಟರ್‌ನಲ್ಲಿ ಭಾನುವಾರ ಬೆಳಿಗ್ಗೆ ಆಗಮಿಸಿ ಗ್ರಾಮದ ಪವನದೇವ ಕಲ್ಯಾಣ ಮಂಟಪದಲ್ಲಿ ಜರುಗಿದ ದಾಸರ ಬಸವರಾಜಪ್ಪ ಮತ್ತು ದಾನಪ್ಪ ಅವರ ಪುತ್ರರ ಮದುವೆಯಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಅವರು ಗ್ರಾಮದ ಮಾಜಿ ಪ್ರಧಾನರಾದ ದಿ. ಕೆ.ಶಾಂತರಾಜ್ ಮತ್ತು ಗ್ರಾ. ಪಂ. ಮಾಜಿ ಅಧ್ಯಕ್ಷ ಕೆ.ಹೆಚ್.ಕೊಟ್ರಪ್ಪ ಅವರ ಮನೆಗಳಿಗೆ ಭೇಟಿ ನೀಡಿ, ನಂತರ ಹೆಲಿಕ್ಯಾಪ್ಟರ್‌ನಲ್ಲಿ ಜಗಳೂರಿಗೆ ತೆರಳಿದರು.

ಶಾಸಕ ಎಸ್.ರಾಮಪ್ಪ, ಜಿ.ಪಂ. ಮಾಜಿ ಅಧ್ಯಕ್ಷ ಜಿ.ದ್ಯಾಮಣ್ಣ, ಜಿ.ಪಂ. ಮಾಜಿ ಸದಸ್ಯರಾದ ಹೊದಿಗೆರೆ ರಮೇಶ್, ಎಂ.ನಾಗೇಂದ್ರಪ್ಪ, ಎಪಿಎಂಸಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಮುಖಂಡರಾದ ಜಿ.ಬೇವಿನಹಳ್ಳಿಯ ಹೆಚ್. ಬಿ.ಶ್ರೀಕಾಂತ್, ಜಿಗಳಿಯ ಜಿ.ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಕೆ.ಎಸ್.ನಂದ್ಯೆಪ್ಪ, ಶಿಕ್ಷಕರಾದ ಜಿ.ಆರ್.ನಾಗರಾಜ್, ದಾಗಿನಕಟ್ಟೆ ರಂಗಸ್ವಾಮಿ, ಕೆಪಿಟಿಸಿಎಲ್ ಎಇಇ ಕೆ.ಎಸ್.ಜಯ್ಯಪ್ಪ, ಪಿಡಬ್ಲ್ಯೂಡಿ ಇಂಜಿನಿಯರ್ ಬಿ.ಜಿ.ಶಿವರುದ್ರಪ್ಪ, ರಾಘು ದೊಡ್ಮನಿ, ಪತ್ರಕರ್ತ ಜಿಗಳಿ ಪ್ರಕಾಶ್, ಪಿ. ಹೆಚ್.ಶಿವಕುಮಾರ್, ಗ್ರಾಮದ ಡಿ. ಸೋಮಶೇಖರ್, ಹೆಚ್.ನಾಗರಾಜ್, ಹೊಸೂರು ರಂಗಪ್ಪ, ದಾಸರ ನಾಗರಾಜ್, ಹಿಂಡಸಘಟ್ಟೇರ ಹನುಮಂತಪ್ಪ, ಗ್ರಾ.ಪಂ. ಸದಸ್ಯ ಶಿವರಾಜ್, ಡಿ.ಜಿ.ಸಿದ್ದಪ್ಪ, ಮಾರುತಿ ದಾಸರ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಹೆಲಿಕ್ಯಾಪ್ಟರ್ ನೋಡಲು ಗ್ರಾಮದ ಜನ ಅಷ್ಟೇ ಅಲ್ಲದೇ, ಸುತ್ತಮುತ್ತಲಿನ ಹಳ್ಳಿಗಳ ಜನರೂ ಆಗಮಿಸಿದ್ದರು.

1992 ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರು ತಮ್ಮ ಸ್ನೇಹಿತರಾದ ಜಿಗಳಿ ಗ್ರಾಮಕ್ಕೆ ದಿ. ಎನ್.ರುದ್ರೇಗೌಡರ ಮಕ್ಕಳಾದ ಇಂದೂಧರ್ ಮತ್ತು ಪ್ರಸನ್ನಕುಮಾರ್ ಅವರ ಮದುವೆ ಸಮಾರಂಭಕ್ಕೆ ಆಗಮಿಸಿ, ಹೆಲಿಕ್ಯಾಪ್ಟರ್‌ನಲ್ಲಿ ಆಗಮಿಸಿ, ಜಿಲ್ಲೆಯ ಗಮನ ಸೆಳೆದಿದ್ದರು. ಆದಾದನಂತರ ಇದೇ ಮೊದಲ ಬಾರಿಗೆ ಸತೀಶ್ ಜಾರಕಿಹೊಳಿ ಅವರು ಹೆಲಿಕ್ಯಾಪ್ಟರ್‌ನಲ್ಲಿ ಹಳ್ಳಿಯ ಖಾಸಗಿಯ ಕಾರ್ಯಕ್ರಮವೊಂದಕ್ಕೆ ಬಂದಿದ್ದು, ಈ ಭಾಗದಲ್ಲಿ ವಿಶೇಷವಾಗಿದೆ.

# 66 ಸಾಧಕರು, 10 ಸಂಘ ಸಂಸ್ಥೆಗಳಿಗೆ ರಾಜ್ಯೋತ್ಸವ ಪ್ರಶಸ್ತಿ

**(1ನೇ ಪುಟದಿಂದ)** ಕಸ್ತೂರಿ ರಂಗನ್. **ಸೈನಿಕ :** ನವೀನ್ ನಾಗಪ್ಪ **ಯಕ್ಷಗಾನ :** ಗೋಪಾಲಾಚಾರ್ಯ

**ಹೊರನಾಡು ಕನ್ನಡಿಗ :** ಡಾ. ಸುನೀತ ಶೆಟ್ಟಿ, ಚಂದ್ರಶೇಖರ್ ಪಾಲ್ವಾಡಿ, ಡಾ. ಸಿದ್ದರಾಮೇಶ್ವರ ಕಂಟಿಕರ್, ಪ್ರವೀಣ್ ಶೆಟ್ಟಿ. **ಪೌರ ಕಾರ್ಮಿಕ :** ರತ್ನಮ್ಮ ಶಿವಪ್ಪ ಬಬಲಾದ. **ಕ್ರೀಡೆ :** ರೋಹನ್ ಬೋಪಣ್ಣ, ಕೆ. ಗೋಪಿನಾಥ್, ರೋಹಿತ್ ಕುಮಾರ್ ಕಟೀಲ್, ಎ. ನಾಗರಾಜ್. **ಸಿನೆಮಾ :** ದೇವರಾಜ್. **ಶಿಕ್ಷಣ :** ಸ್ವಾಮಿ ಲಿಂಗಪ್ಪ, ಶ್ರೀಧರ್ ಚಕ್ರವರ್ತಿ, ಪ್ರೊ. ಪಿ.ವಿ. ಕೃಷ್ಣ ಭಟ್. **ಸಂಕೀರ್ಣ :** ಡಾ. ಬಿ. ಅಂಬಣ್ಣ, ಕ್ಯಾಪ್ಟನ್ ರಾಜಾರಾವ್, ಗಂಗಾವತಿ ಪ್ರಾಣೇಶ್.

**ಸ್ವಾತಂತ್ರ್ಯದ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ :** ಶ್ರೀ ವೀರೇಶ್ವರ ಪುಣ್ಯಾಶ್ರಮಯ ಅಂಧ ಮಕ್ಕಳ ಶಾಲೆ (ಗದಗ), ಕರ್ನಾಟಕ ಹಿಮೋಫಿಲಿಯಾ ಸೊಸೈಟಿ (ದಾವಣಗೆರೆ), ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ (ಕಲಬುರಗಿ), ಶ್ರೀ ರಾಮಕೃಷ್ಣಾಶ್ರಮ (ದಕ್ಷಿಣ ಕನ್ನಡ), ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್ (ಹುಬ್ಬಳ್ಳಿ), ಅನುಗ್ರಹ ಕಣ್ಣಿನ ಆಸ್ಪತ್ರೆ (ವಿಜಯಪುರ), ಉತ್ಸವ್ ರಾಕ್ ಗಾರ್ಡನ್ (ಹಾವೇರಿ), ಅದಮ್ಯ ಚೇತನ (ಬೆಂಗಳೂರು), ಬನಶಂಕರಿ ಮಹಿಳಾ ಸಮಾಜ (ಬೆಂಗಳೂರು).


**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**ಬೇಕಾಗಿದ್ದಾರೆ**
ಡೆಂಟಲ್ ಆರ್ಟ್ ಲ್ಯಾಬ್ ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರೋಡ್, ದಾವಣಗೆರೆ-05. ಆಕರ್ಷಕ ಸಂಬಳ ಪುರುಷ ಮತ್ತು ಮಹಿಳೆಯರು, ವಯೋಮಿತಿ 18-28
99000 05433

**ಮಾರಾಟಕ್ಕೆ**
DCM ಟೌನ್ ಸೈಟ್ (ಪೂರ್ವ) 40×70, ಸ್ವಾಮಿ ವಿವೇಕಾನಂದ ಬಡಾವಣೆ ಸೈಟ್ (ಪಶ್ಚಿಮ) 30×60, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, ತರಳಬಾಳು ಬಡಾವಣೆ ಸೈಟ್ (ದಕ್ಷಿಣ) 30×50, SS ಲೇಔಟ್ ಸೈಟ್- 40×63, ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್-ಪಶ್ಚಿಮ) 35×61
78996 36597, 99165 25828

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**ಬಂಗಾರದ ಉಳಿತಾಯ ಯೋಜನೆ!**
ಪಾವತಿಸಿ 12 ಕಂತುಗಳನ್ನು ಪಡೆಯಿರಿ 3 ತಿಂಗಳ ಉಚಿತ Bonus. ಕೂಡಲೇ ಸಂಪರ್ಕಿಸಿ
96329 38111

**WANTED**
FACULTY TO TEACH
# C, C++, JAVA
# PYTHON, HTML
AND OTHER SOFTWARES
FRESHERS CAN APPLY
PH: 8217624367
DAVANGERE

**WANTED**
**KAVERI MEDITRADE (P) LTD** Computer operators 4 Nos (Ladies only), Attractive salary with ESI benefits, Must know any 4 of the languages mentioned below (Kannada, English, Hindi, Tamil, Telugu, Malayalam, Marathi). **Timings:** 9 AM to 7 PM (Sunday Holiday). for queries, **call/whatsapp No:** 90355 03140

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು **Rheumatologist** (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.11.2021ರ ಮಂಗಳವಾರ ಮತ್ತು 03.11.2021ರ ಬುಧವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ದಿನಸಿ ಮಾರುವ ಅನುಭವವಿರುವ/ಬಿಲ್ಲಿಂಗ್‌ನಲ್ಲಿ ಅನುಭವವಿರುವ 2 ಜನ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ. ಟಿ.ಕೆ.ಎಸ್. ಟವರ್, ಕೆ.ಇ.ಬಿ. ಆಫೀಸ್ ಹತ್ತಿರ. ತ್ಯಾವಣಗಿ.
99725 43794

**ಬೇಕಾಗಿದ್ದಾರೆ**
ಹರಿಹರದಲ್ಲಿ ಕಾರ್ಯ ನಿರ್ವಹಿಸಲು Teacher ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
96068 47121

75 ಸ್ವಾತಂತ್ರ್ಯದ ಅಮೃತಮಹೋತ್ಸವ

ಮಾತಾಡ್ ಮಾತಾಡ್ ಕನ್ನಡ
**ಕನ್ನಡಕ್ಕಾಗಿ ನಾವು**
ಕರ್ನಾಟಕ ರಾಜ್ಯೋತ್ಸವ ಅಭಿಯಾನ

ಕನ್ನಡ ಕನ್ನಡ ಬನ್ನಿ ನಮ್ಮ ಸಂಗಡ




ಹುಬ್ಬಳ್ಳಿಯಲ್ಲಿ ನಡೆದ "ಮಾತಾಡ್ ಮಾತಾಡ್ ಕನ್ನಡ" ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ **ಶ್ರೀ ಬಸವರಾಜ ಎಸ್. ಬೊಮ್ಮಾಯಿ** ಅವರು ಕನ್ನಡಕ್ಕಾಗಿ ಎತ್ತಿದ ಧ್ವನಿ




ಹಚ್ಚೇವು
**ಕನ್ನಡದ ದೀಪ**
ಕರುನಾಡ ದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವ ದೀಪ
– ಡಿ ಎಸ್ ಕರ್ಕಿ



ನಾಡ ಬಾಂಧವರೇ,

ಕನ್ನಡ ಭಾಷೆ ಕಲಿಯಲು ಸುಲಭ. ಕನ್ನಡ ಭಾಷೆ ಮಾತನಾಡಲು ಸರಳ. ಕನ್ನಡದ ಲಿಪಿ ನೋಡಲು ಅಂದ. ಕನ್ನಡದ ಮಾತು ಕೇಳಲು ಚೆಂದ. ಕನ್ನಡ ಭಾಷೆಯ ಅಭಿವ್ಯಕ್ತಿ ಪ್ರಖರ ಮಾತ್ರವಲ್ಲ, ನಿಖರ ಕೂಡ.

ಭಾಷಾ ಲೋಕದಲ್ಲಿ ಕನ್ನಡಕ್ಕೆ ವಿಶೇಷ ಸ್ಥಾನವಿದೆ. ಕನ್ನಡ ನಾಡಿನಲ್ಲಿ ಜನಿಸಿರುವ, ಬಾಳಿ-ಬದುಕುತ್ತಿರುವ ನಾವೆಲ್ಲರೂ ಭಾಗ್ಯವಂತರು.

**ಬಸವರಾಜ ಎಸ್. ಬೊಮ್ಮಾಯಿ**
ಮುಖ್ಯಮಂತ್ರಿ

**ಸರ್ವರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು**

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

## ಇಂದು ಮಾತಾಡ್ ಮಾತಾಡ್ ಕನ್ನಡ 'ಚಿಂತನಾ ಲಹರಿ' ಕಾರ್ಯಕ್ರಮ

ಗ್ರಂಥ ಸರಸ್ವತಿ ಪ್ರತಿಭಾ ರಂಗ ದಾವಣಗೆರೆ ಇವರ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮಾತಾಡ್ ಮಾತಾಡ್ ಕನ್ನಡ, ಕನ್ನಡ ಸಂಸ್ಕೃತಿ ಕುರಿತ ' ಚಿಂತನಾ ಲಹರಿ' ಕಾರ್ಯಕ್ರಮ ಇಂದು ಸಂಜೆ 6 ಗಂಟೆಗೆ ವಿದ್ಯಾನಗರ ಉದ್ಯಾನವನದ ಕಾವ್ಯ ಮಂಟಪದಲ್ಲಿ ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಿವಾನಂದ ಗುರೂಜಿ ಸಮ್ಮುಖ, ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮೇಯರ್ ಎಸ್.ಟಿ. ವೀರೇಶ್, ದೂಡಾ ದೇವರಮನಿ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯ ಶಿವನಹಳ್ಳಿ ರಮೇಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ರೈತ ಮುಖಂಡ ತೇಜಸ್ವಿ ಪಟೇಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ನಿರ್ದೇಶಕ ರವಿಚಂದ್ರ, ವಿಶ್ರಾಂತ ಮುಖ್ಯ ಶಿಕ್ಷಕ ಎಂ.ಆರ್. ಮೂರ್ತೆಯ್ಯ, ವಿಶ್ರಾಂತ ಪ್ರಾಚಾರ್ಯ ಎಲ್.ಎಂ. ಪ್ರಭಾಕರ್, ಪತ್ರ ಬರಹಗಾರ ನ್ಯಾಮತಿಯ ಶ್ರೀನಿವಾಸ ನರಸಿಂಗ ನಾಡಿಗರು, ವಿಶ್ರಾಂತ ಉಪನ್ಯಾಸಕ ಡಾ.ಎ.ಬಿ. ರಾಮಚಂದ್ರಪ್ಪ, ವಿಶ್ರಾಂತ ವ್ಯವಸ್ಥಾಪಕ ಜಿ. ಮಹೇಶ್ವರಪ್ಪ, ಇಂಜಿನಿಯರ್ಸ್ ಅಸೋಸಿಯೇಷನ್ ಹರಿಹರದ ಅಧ್ಯಕ್ಷ ಕೆ. ಶಿವಪ್ರಕಾಶ್ ಶಾಸ್ತ್ರಿ, ಶಿವಯೋಗಾಶ್ರಮದ ಸಹ ಕಾರ್ಯದರ್ಶಿ ಎಂ.ಕೆ. ಬಕ್ಕಪ್ಪ, ಕನ್ನಡ ಪರ ಹೋರಾಟಗಾರ ಬಂಕಾಪುರದ ಚನ್ನಬಸಪ್ಪ, ಮುಖ್ಯ ಶಿಕ್ಷಕ ಕುಬೇಂದ್ರಪ್ಪ, ಸಮಾಜ ಸೇವಕ ಹಾಲಸ್ವಾಮಿ ಭಾಗವಹಿಸಲಿದ್ದಾರೆ.

## ಕ್ರೈಸ್ ಅತಿಥಿ ಶಿಕ್ಷಕರ ಮುಂದುವರಿಕೆಗೆ ಮನವಿ

ದಾವಣಗೆರೆ, ಅ.31- 2019 ರಿಂದ ಹೊರಗುಳಿದಿರುವ ಜಿಲ್ಲೆಯ KREIS ವಸತಿ ಶಾಲೆಗಳ ಅತಿಥಿ ಶಿಕ್ಷಕರನ್ನು ಉಚ್ಚ ನ್ಯಾಯಾಲಯದ ತೀರ್ಪು ಹಾಗೂ ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರ ಆದೇಶದ ಅನ್ವಯ ಮುಂದುವರೆಸುವಂತೆ ಕೋರಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಿಗೆ ರಾಜ್ಯ ಕ್ರೈಸ್ ವಸತಿ ಶಾಲೆಗಳ ಅತಿಥಿ ಶಿಕ್ಷಕರ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಉಪನಿರ್ದೇಶಕರು ಕ್ರೈಸ್ ಕಾರ್ಯನಿರ್ವಾಹಕ ನಿರ್ದೇಶಕರ ಜೊತೆ ಚರ್ಚಿಸಿ ಸಲಹೆ ಪಡೆದು ಒಂದೆರಡು ದಿನಗಳಲ್ಲಿ ಈ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಬಿ. ನಿಂಗಪ್ಪ, ಪ್ರಧಾನ ಕಾರ್ಯದರ್ಶಿ ಗಂಗಾಧರ್ ಬಿ.ಎಲ್. ನಿಟ್ಟೂರ್, ಶಿಕ್ಷಕರಾದ ತಿಮ್ಮಪ್ಪ, ಮಧುಮತಿ, ವೀರೇಂದ್ರ ಪಾಟೀಲ್ ಇನ್ನಿತರರಿದ್ದರು

# ದೇಶವಾಳುವ ಮೂರು 'ಸಿ' ಗಳ ಮುಕ್ತಿಗೆ ವೀರ ಯೋಧರು ನೀವಾಗಿ

### ಕನ್ನಡ ಕುವರ-ಕುವರಿ, ಸರಸ್ವತಿ ಪುರಸ್ಕಾರ ಸಮಾರಂಭದಲ್ಲಿ ಯುವಜನತೆಗೆ ವಿಶ್ರಾಂತ ನ್ಯಾ. ಅರಳಿ ನಾಗರಾಜ್ ಕರೆ



ದಾವಣಗೆರೆ, ಅ.31- ದೇಶವನ್ನು ಕಿತ್ತು ತಿನ್ನುತ್ತಿರುವ ರೋಗಗಳಾಗಿರುವ ಭ್ರಷ್ಟಾಚಾರ, ಜಾತೀಯತೆ ಹಾಗೂ ಅಪರಾಧ, ಅನೈತಿಕತೆ ಇವುಗಳಿಗೆ ಮುಕ್ತಿ ಹಾಡುವ ಶಕ್ತಿಯು ಇಡೀ ದೇಶವೇ ಎದುರು ನೋಡುತ್ತಿರುವ ಯುವ ಸಮೂಹ, ವಿದ್ಯಾರ್ಥಿಗಳ ಮೇಲಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ್ ಅಭಿಲಾಷೆ ವ್ಯಕ್ತಪಡಿಸಿದರು.

ಅವರು, ಇಂದು ನಗರದ ಸಿದ್ಧಗಂಗಾ ಶಾಲೆಯ ಆವರಣದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ಸಾಲಿಗ್ರಾಮ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಕುವರ-ಕುವರಿ ಜಿಲ್ಲಾ ಪ್ರಶಸ್ತಿ, ಸರಸ್ವತಿ ಪುರಸ್ಕಾರ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೂರು ಸಿ (corruption, castism, crime) ಗಳಿಂದ ದಯವಿಟ್ಟು ದೂರ ವಿರಿ. ದೇಶವನ್ನಾಳುತ್ತಿರುವ ಭ್ರಷ್ಟಾಚಾರ, ಜಾತೀಯತೆ ಹಾಗೂ ಅಪರಾಧ ಮನೋಭಾವನೆಯಿಂದ ಮುಕ್ತರಾಗಿರಿ. ಇಂದಿನ ರಾಜಕೀಯ, ಸಾಮಾಜಿಕ ವ್ಯವಸ್ಥೆಯಲ್ಲಿ ಅಪಮೌಲ್ಯಗಳೇ ವಿಜೃಂಭಿಸುತ್ತಿವೆ. ಭ್ರಷ್ಟಾಚಾರವೇ ಕಾನೂನು ಆಗಿಬಿಟ್ಟಿವೆ. ಚುನಾವಣೆಗಳಲ್ಲಿ ಜಾತಿ, ಹಣ ಹಾಗೂ ತೋಳ್ಬಲವೇ ಹೆಚ್ಚಿದೆ. ಇವು ತೊಲಗಬೇಕಿದೆ. ಇವುಗಳನ್ನು ನಮ್ಮ ರಾಷ್ಟ್ರದಿಂದ ಮುಕ್ತಗೊಳಿಸುವ ಸಾಮರ್ಥ್ಯ, ಅವಕಾಶ ನಿಮ್ಮಗಿದ್ದು ವೀರ ಯೋಧರು, ಸಾಮಾಜಿಕ ಯೋಧರಾಗಿ ಪಣ ತೊಡಿ. ಆಗ ಅಪ್ಪಟ್ಟ ಪ್ರಾಮಾಣಿಕ ನಾಯಕತ್ವ, ಆಡಳಿತ ನಡೆಸುವವರು ನೀವಾಗುವಿರಿ ಎಂದು ಕಳಕಳಿಯಿಂದ ವಿನಂತಿಸಿದರು.

25 ಲಕ್ಷ ರೂ. ನೀಡಿದರೆ ಸಾಕು, ಎಫ್‌ಡಿಎ ಪರೀಕ್ಷೆಯನ್ನೇ ಸರಿಯಾಗಿ ಬರೆಯದವರಿಗೆ ಅಂಕ ಬರುವಂತೆ ಮಾಡಿ ಹುದ್ದೆ ಮನೆ ಬಾಗಿಲಿಗೆ ಬರುವಂತಹ ವ್ಯವಸ್ಥೆ ಇಂದಿದೆ. ಇದರಿಂದಾಗಿ ಪ್ರಾಮಾಣಿಕವಾಗಿ ಕಷ್ಟಪಟ್ಟು ಓದಿದ ಪ್ರತಿಭಾವಂತರು ಉದ್ಯೋಗ ಪಡೆಯುವಲ್ಲಿ ವಂಚಿತರಾಗುತ್ತಾರೆ. ನಮ್ಮಲ್ಲಿ ಶ್ರೇಷ್ಠ ಸಂವಿಧಾನವಿದ್ದರೂ ಸಮಾನ ರಕ್ಷಣೆ, ಸಮಾನ ಅವಕಾಶ ಇಲ್ಲವಾಗಿದೆ ಎಂದು ಬೇಸರಿಸಿದರು.

ಸ್ಪರ್ಧೆ ಇಲ್ಲದ ಏಕೈಕ ಕ್ಷೇತ್ರವೇ ರಾಜಕೀಯ. ಒಬ್ಬ ಶಾಸಕ ತೀರಿಕೊಂಡರೆ ಆತನ ಅನಕ್ಷರಸ್ಥ ಪತ್ನಿಗೆ ಟಿಕೆಟ್ ನೀಡಲಾಗುತ್ತಿದೆ. ಅವರನ್ನೇ ಮಂತ್ರಿ ಮಾಡುವ ವ್ಯವಸ್ಥೆ ಇದೆ. ಸಿಂಧಗಿ, ಹಾನಗಲ್ ಕ್ಷೇತ್ರಗಳ ಉಪಚುನಾವಣೆಗಳಲ್ಲಿ ರಾಜಕಾರಣಿಗಳು ಬಳಸಿದ ಪದ ಬಳಕೆ ಗಮನಿಸಿದರೆ ಬೇಸರ ಎನಿಸುತ್ತದೆ ಎಂದರು.

ವಿದ್ಯಾರ್ಥಿಗಳು ಜೀವನದಲ್ಲಿ ದಕ್ಷತೆ, ಸಚ್ಚಾರಿತ್ರ್ಯ, ಬದ್ಧತೆ, ಧೈರ್ಯ ಹಾಗೂ ಕರುಣಾ ಮನೋಭಾವಗಳನ್ನು ರೂಢಿಸಿಕೊಳ್ಳಬೇಕು.

**ಪ್ರಾಮಾಣಿಕ ನಾಯಕರ ಆಯ್ಕೆ ಯುವ ಜನತೆಯ ಕೈಲಿದೆ**

ಯುವ ಜನತೆ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯ ಅಲ್ಲ, ಕಷ್ಟ ಸಾಧ್ಯವೂ ಅಲ್ಲ. ಸರಳ ಸಾಧ್ಯ. 18 ವರ್ಷಕ್ಕೇ ಮತದಾನದ ಹಕ್ಕು ಪಡೆಯುವ ಯುವ ಜನತೆ ಯಾವುದೇ ಚುನಾವಣೆಯಲ್ಲಿ ಯಾರೇ ಸ್ಪರ್ಧಿಸಿದ್ದರೂ ಆ ವ್ಯಕ್ತಿ ಎಷ್ಟು ಅರ್ಹರು, ಯೋಗ್ಯರು ಎಂಬುದರ ಮೇಲೆ ಆಯ್ಕೆ ಮಾಡಬೇಕು. ಏನಾದರೂ ಆಗು ಮೊದಲು ನೀ ರಾಷ್ಟ್ರದ ಉತ್ತಮ ಪ್ರಜೆಯಾಗು. ಆದರ್ಶ ನಾಗರಿಕರಾಗಬೇಕು.

-ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ್.

ಅಂಕಗಳಿಂದ ಹಿನ್ನಡೆಯಾದರೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಅಧೀರರಾಗಬಾರದು ಎಂದು ಕಿವಿಮಾತು ಹೇಳಿದರು.

ಭ್ರಷ್ಟಾಚಾರ ಆರೋಪ ಹೊತ್ತು ಜೈಲಿಗೆ ಹೋಗಿ ಬಂದವರಿಗೂ ಮೆರವಣಿಗೆ, ಆರತಿ ಮಾಡಿ ಗೌರವಿಸಲಾಗುತ್ತಿದೆ. ಪ್ರಾಮಾಣಿಕರಿಗೂ ಆರತಿ ಮಾಡಿ ಗೌರವಿಸುವ ಪರಿಸ್ಥಿತಿ ಇದ್ದು, ಇಂದು ಭ್ರಷ್ಟರಿಗೂ - ಪ್ರಾಮಾಣಿಕರಿಗೂ ಯಾವುದೇ ವ್ಯತ್ಯಾಸವೇ ಇಲ್ಲವೆಂಬಂತಾಗಿದೆ. ಇದು ಮುಂದಿನ ಪೀಳಿಗೆಯ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ಜಗತ್ತಿನಲ್ಲಿ ಅತ್ಯಂತ ಪ್ರಾಮಾಣಿಕತೆಯಿಂದ ಜ್ಞಾನವನ್ನು ಧಾರೆ ಎರೆಯುವ, ಮಕ್ಕಳಲ್ಲಿ ಹುದುಗಿರುವ ಸುಪ್ತ ಪ್ರತಿಭೆ ಹೊರ ತರುವ ಶಿಕ್ಷಕರ ಕೊರತೆ ಕಾಡುತ್ತಿದೆ. ಗುರುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಶಿಕ್ಷಣವೆಂದರೆ ಕೇವಲ ಶಾಲೆಗೆ ಹೋಗುವುದು, ಪಠ್ಯ ಪುಸ್ತಕ ಓದುವುದು, ಪಠ್ಯ ಕ್ರಮ ಮುಗಿಸುವುದು, ಅಂಕ ಪಡೆಯುವುದು, ಐಎಎಸ್, ಐಪಿಎಸ್ ಹೀಗೆ ಉನ್ನತ ಹುದ್ದೆ ಅಲಂಕರಿಸುವುದಷ್ಟೇ ಉದ್ದೇಶವಾಗಿದೆ. ಶಿಕ್ಷಣ ಲಾಭದಾಯಕ ಉದ್ಯಮವಾಗಿದೆ.


ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ, ಯುವ ಸಮೂಹ ಯಾವುದೇ ಹುದ್ದೆ ಅಲಂಕರಿಸಿದರೂ ಕನ್ನಡಮ್ಮನ ಕೈಂಕರ್ಯ ಬಿಡಬಾರದು. ಸುಂದರ ಕನ್ನಡವನ್ನು ಉಳಿಸಿ, ಬೆಳೆಸಬೇಕು ಎಂದು ಆಶಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ ಇಂಜಿನಿಯರಿಂಗ್, ಉನ್ನತ ಪದವಿ, ಬ್ಯಾಂಕಿಂಗ್ ಸೇರಿ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಇಂದು ಕನ್ನಡದಲ್ಲಿ ಮಾಡುವ ಅವಕಾಶಗಳಿವೆ. ಹೀಗಾಗಿ ಇಂದಿನ ವಿದ್ಯಾರ್ಥಿಗಳಲ್ಲಿ ಮಾತೃ ಭಾಷೆ ಬಗ್ಗೆ ಕೀಳರಿಮೆ ಬೇಡ ಎಂದರು.

ಹಿರಿಯ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ ಕಾರ್ಯಕ್ರಮ ಉದ್ಘಾಟಿಸಿದರು. ಎಸ್ಸೆಸ್ಸೆಲ್ಸಿಯಲ್ಲಿ 600ಕ್ಕೂ ಹೆಚ್ಚು ಅಂಕ ಪಡೆದವರಿಗೆ ಸರಸ್ವತಿ ಪುರಸ್ಕಾರ ಹಾಗೂ ಕನ್ನಡ ಭಾಷೆಯಲ್ಲಿ 120ಕ್ಕೂ ಹೆಚ್ಚು ಅಂಕ ಗಳಿಸಿದವರಿಗೆ ಕನ್ನಡ ಕುವರ-ಕುವರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಶಾಲೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜ, ಸಿದ್ಧಗಂಗಾ ಪಪೂ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್, ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ ಶೆಣೈ, ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಜಿ.ಬಿ. ಲೋಕೇಶ್, ಹೇಮಾ ಶಾಂತಪ್ಪ ಪೂಜಾರಿ, ಜ್ಯೋತಿ ಗಣೇಶ ಶೆಣೈ ಸೇರಿದಂತೆ ಇತರರು ಇದ್ದರು.

# ಮೀಸಲಾತಿ ಹೆಚ್ಚಿಸದಿದ್ದರೆ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ



**ಹರಪನಹಳ್ಳಿ ತಾ.ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ**

ಹರಪನಹಳ್ಳಿ, ಅ.31- ರಾಜ್ಯದಲ್ಲಿ 50 ಲಕ್ಷದಷ್ಟು ಇರುವ ವಾಲ್ಮೀಕಿ ನಾಯಕ ಜನಾಂಗಕ್ಕೆ ಸರ್ಕಾರ ಶೇ. 7.5 ಮೀಸಲಾತಿಯನ್ನು ನೀಡಲೇಬೇಕು, ಇಲ್ಲವಾದರೆ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಹೇಳಿದರು.

ತಾಲ್ಲೂಕಿನ ಹರಿಯಮ್ಮನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ 4 ದಶಕಗಳಿಂದ ಮೀಸಲಾತಿ ಹೆಚ್ಚಳ ವಿಷಯವಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದರೂ ಕೂಡ, ಸರ್ಕಾರ ಬರೀ ಕಾಲಹರಣ ಮಾಡುತ್ತಾ, ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದೆ. ಸಮಾಜದ ಮೀಸಲಾತಿಯಿಂದ ಚುನಾಯಿತರಾದ ವಾಲ್ಮೀಕಿ ನಾಯಕ ಸಮಾಜದ ಶಾಸಕರು, ಸಂಸದರು ಸಮುದಾಯಕ್ಕೆ ಸಿಗಬೇಕಾದ ಮೀಸಲಾತಿಗಾಗಿ ಕಡ್ಡಾಯವಾಗಿ ಹೋರಾಟಕ್ಕೆ ಇಳಿಯಬೇಕು ಎಂದ ಅವರು, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರ ನಿರ್ದೇಶನದಂತೆ ನಾವು ಪಕ್ಷ ಭೇದ ಮರೆತು ಒಂದಾಗಬೇಕಿದೆ ಎಂದರು.

ಮಹರ್ಷಿ ವಾಲ್ಮೀಕಿಯವರ ಕಾವ್ಯಗಳಲ್ಲಿ ಪಿತೃ ವಾಕ್ಯ ಪರಿಪಾಲನೆ, ಸಹೋದರತ್ವ, ಸ್ತ್ರೀಯರಿಗೆ ಗೌರವ, ದುಷ್ಟ ಸಂಹಾರ, ಭಕ್ತಿ, ಏಕಪತ್ನಿತ್ವ, ಪರಿಸರ ಸಂರಕ್ಷಣೆಯಂತಹ ಅನೇಕ ನೀತಿಗಳನ್ನೊಳಗೊಂಡಿರುವ ರಾಮಾಯಣ ಜಗತ್ತಿಗೆ ಸಂದೇಶ ನೀಡಿ, ದೇಶದ ಮೌಲ್ಯ ಹೆಚ್ಚಿಸಿದೆ ಎಂದರು.

ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್ ಹರಿಯಮ್ಮನಹಳ್ಳಿ ಮಾತನಾಡಿ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದ ಜನಾಂಗದವರು ವಾಸಿಸುತ್ತಿದ್ದು, ಸಂವಿಧಾನದ ಆಶಯದಂತೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು. ನಮ್ಮನ್ನು ಬಳಸಿಕೊಂಡು ಅಧಿಕಾರ ನೀಡುವಾಗ ತಾರತಮ್ಯ ವೆಸಲಾಗುತ್ತಿದೆ. ನಮ್ಮಲ್ಲಿ ಸಂಘಟನೆ ಕೊರತೆ ಇದೆ. ಆದ್ದರಿಂದ ಸಮಾಜ ಬಾಂಧವರು ಪಕ್ಷ ಭೇದ ಮರೆತು ಸಂಘಟಿತರಾಗಿ ಹೋರಾಟ ಮಾಡಬೇಕಾಗಿದೆ ಎಂದರು.

ಈ ವೇಳೆ ಮುಖಂಡರಾದ ಟಿ.ಭೀಮಪ್ಪ, ಚಂದ್ರಪ್ಪ, ಮಂಜುನಾಥ ಸೇರಿದಂತೆ, ಗ್ರಾಮದ ಮುಖಂಡರು, ಯುವಕರು ಇದ್ದರು.

## ಮಾಗನೂರು ಬಸಪ್ಪ ಪಿಯು ಕಾಲೇಜಿನ ವಿದ್ಯಾರ್ಥಿ ವೇದಿಕೆ ಉದ್ಘಾಟನೆ

ದಾವಣಗೆರೆ, ಅ.31 - 2021-22 ನೇ ಸಾಲಿನ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ವೇದಿಕೆ ಉದ್ಘಾಟನೆ, ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಎಂ.ಬಿ. ಟ್ಯಾಲೆಂಟ್ ಹಂಟ್ ನ ಪ್ರತಿಭೆಗಳಿಗೆ ಬಹುಮಾನ ವಿತರಣಾ ಸಮಾರಂಭ ಮಾಗನೂರು ಬಸಪ್ಪ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳಾದ ಶರಣ ಸಂಗಮೇಶ್ವರ ಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ನಿರ್ದೇಶಕ ಡಾ. ಜಿ. ಎನ್.ಹೆಚ್ ಕುಮಾರ್ 2021-22 ನೇ ಸಾಲಿನ ವಿದ್ಯಾರ್ಥಿ ವೇದಿಕೆಯನ್ನು ಉದ್ಘಾಟಿಸಿದರು. ಈಶ್ವರಮ್ಮ ಶಾಲೆಯ ಪ್ರಾಚಾರ್ಯರಾದ ಕೆ.ಎಸ್.ಪ್ರಭುಕುಮಾರ್, ಉಪಪ್ರಾಚಾರ್ಯ ಶಶಿರೇಖಾ ಜಿ.ಎಸ್ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯ ಡಾ.ಪ್ರಸಾದ್ ಬಂಗೇರ ಎಸ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿವೇದಿಕೆಯ ಪ್ರತಿನಿಧಿಗಳೆಲ್ಲರೂ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

## ನಾಳೆ ಜಿಗಳಿಗೆ ನಂದಿಗುಡಿ ಶ್ರೀಗಳು

### ನೇಮಕ ಪ್ರಶ್ನಿಸಿದ ಇಂದೂಧರ್ ಮನೆಯಲ್ಲಿಯೇ ಪಾದ ಪೂಜೆ



ಮಲೇಬೆನ್ನೂರು, ಅ.31- ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು, ಸಮಾಜ ಸಂಘಟನೆಗಾಗಿ ಹಳ್ಳಿಗಳ ಪ್ರವಾಸ ಹಮ್ಮಿಕೊಂಡಿದ್ದು, ನ.2ನೇ ಮಂಗಳವಾರ ಜಿಗಳಿ ಗ್ರಾಮಕ್ಕೆ ಭೇಟಿ ನೀಡಲಿದ್ದಾರೆ. ಅಂದು ಬೆಳಿಗ್ಗೆ 10.30ಕ್ಕೆ ಗ್ರಾಮಕ್ಕೆ ಆಗಮಿಸುವ ಶ್ರೀಗಳು ಮೆರವಣಿಗೆ ಮೂಲಕ ಸ್ವಾಗತಿಸಿ, ನಂತರ ಡಿ.ಎನ್.ರುದ್ರೇಗೌಡ ವೃತ್ತದಲ್ಲಿ ಸಮಾಜದ ಸಭೆ ನಡೆಸಲಿದ್ದಾರೆ.

**ಇಂದೂಧರ್ ಮನೆಗೆ ಭೇಟಿ:** 2006 ರಿಂದಲೂ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಜೊತೆ ಅಂತರ ಕಾಯ್ದುಕೊಂಡು, ಶ್ರೀಗಳ ನೇಮಕ ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗಿದ್ದ ಜಿಗಳಿಯ ಇಂದೂಧರ್ ಅವರು, ಹಿಂದಿನ ಎಲ್ಲಾ ಘಟನೆಗಳನ್ನು ಮರೆತು, ಶ್ರೀಗಳ ಜೊತೆ ಕೈ ಜೋಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದೂಧರ್ ಅವರು ಅಂದು ಶ್ರೀಗಳನ್ನು ತಮ್ಮ ಮನೆಗೆ ಪಾದ ಪೂಜೆಗೆ ಕರೆಯುವ ಮೂಲಕ ಎಲ್ಲರಿಗೂ ಅಚ್ಚರಿ ಮೂಡಿಸಿದ್ದಾರೆ.

## ಒವೈಸಿ ವಿರುದ್ಧ ಕ್ರಿಮಿನಲ್ ನಿಂದನೆ ಪ್ರಕರಣಕ್ಕೆ ವೇಣುಗೋಪಾಲ್ ನಕಾರ

ನವದೆಹಲಿ, ಅ. 31 – ಮಹಾತ್ಮ ಗಾಂಧಿ ಹತ್ಯೆಯಲ್ಲಿ ವಿ.ಡಿ. ಸಾವರ್ಕರ್ ಭಾಗಿಯಾಗಿದ್ದರು ಎಂದು ತನಿಖಾ ಆಯೋಗವೊಂದು ತಿಳಿಸಿದೆ ಎಂದು ಹೇಳಿದ್ದ ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ವಿರುದ್ಧ ಕ್ರಿಮಿನಲ್ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ನೀಡಲಾಗದು ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಹೇಳಿದ್ದಾರೆ.

ಒವೈಸಿ ಹೇಳಿಕೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸಂಸ್ಥೆಯೊಂದು ಅಟಾರ್ನಿ ಜನರಲ್ ಅವರಿಗೆ ಪತ್ರ ಬರೆದಿತ್ತು. ಸಾವರ್ಕರ್ ಗಾಂಧೀಜಿ ಹತ್ಯೆಯಲ್ಲಿ ಭಾಗಿಯಾಗಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ತಿಳಿಸಲಾಗಿದೆ. ಆದರೆ, ಇಡೀ ತೀರ್ಪನ್ನು ಪರಿಗಣಿಸಿದಾಗ, ನ್ಯಾಯಾಲಯ ನ್ಯಾ. ಕಪೂರ್ ತನಿಖಾ ಆಯೋಗದ ವರದಿ ಪರಿಶೀಲಿಸಲು ಬಯಸಲಿಲ್ಲ ಎಂಬುದು ತಿಳಿದು ಬರುತ್ತದೆ ಎಂದು ವೇಣುಗೋಪಾಲ್ ಹೇಳಿದ್ದಾರೆ. ನ್ಯಾ. ಕಪೂರ್ ಅವರು 1962ರಲ್ಲಿ ನಿವೃತ್ತರಾಗಿದ್ದರು. ನಿವೃತ್ತ ನ್ಯಾಯಮೂರ್ತಿಗಳ ತನಿಖಾ ಆಯೋಗವನ್ನು 1966ರಲ್ಲಿ ರೂಪಿಸಲಾಗಿತ್ತು. ಹೀಗಾಗಿ ಒವೈಸಿ ಹೇಳಿಕೆ ಸುಪ್ರೀಂ ಕೋರ್ಟ್ ತೀರ್ಪಿಗೆ ಸಂಬಂಧಿಸಿದ್ದಲ್ಲ ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ಒವೈಸಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಅಭಿನವ್ ಭಾರತ್ ಕಾಂಗ್ರೆಸ್ ಸಂಘಟನೆ ಹಾಗೂ ಸ್ಥಾಪಕ ಪಂಕಜ್ ಫಡ್ನೀಸ್ ಅವರು ಅಟಾರ್ನಿ ಜನರಲ್‌ಗೆ ಪತ್ರ ಬರೆದಿದ್ದರು.

## ಜಗಳೂರು : ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ತಾಲ್ಲೂಕಿನ 10 ಜನ ಆಯ್ಕೆ



ಜಗಳೂರು, ಅ.31- 66ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿ ತಾಲ್ಲೂಕಿನಿಂದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 10 ಜನರು ಆಯ್ಕೆಯಾಗಿದ್ದಾರೆ ಎಂದು ಪ್ರಭಾರಿ ತಹಶೀಲ್ದಾರ್ ಮಂಜಾನಂದ ತಿಳಿಸಿದರು. ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಪತ್ರಿಕೋದ್ಯಮ ಕ್ಷೇತ್ರದಿಂದ 'ಜನತಾವಾಣಿ' ಕನ್ನಡ ದಿನಪತ್ರಿಕೆ ಉಪಸಂಪಾದಕ ಮತ್ತು ಹಿರಿಯ ಪತ್ರಕರ್ತ ಬಿ.ಪಿ.ಸುಭಾನ್, ಸಾಹಿತ್ಯ ಕ್ಷೇತ್ರದಲ್ಲಿ ಹಾಲೇಹಳ್ಳಿ ಗ್ರಾಮದ ಎನ್.ಟಿ.ಯರ್ರಿಸ್ವಾಮಿ, ಸುಭಾಷ್ ಚಂದ್ರಬೋಸ್, ಸಂಗೀತ ಕ್ಷೇತ್ರದ ಎಂ.ಡಿ.ಆಂಜನೇಯ, ಸಾಂಸ್ಕೃತಿಕ ಕ್ಷೇತ್ರದಿಂದ ಓಬಣ್ಣ, ಕೃಷಿ ಕ್ಷೇತ್ರದಿಂದ ಶಿವರುದ್ರಪ್ಪ, ಸಾಮಾಜಿಕ ಕ್ಷೇತ್ರದಿಂದ ಭದ್ರಾ ಮೇಲ್ದಂಡೆ ಹೋರಾಟ ಸಮಿತಿಯ ತೋರಣಗಟ್ಟೆ ತಿಪ್ಪೇಸ್ವಾಮಿ, ಸಣ್ಣಸೂರಯ್ಯ, ಕಟ್ಟಿಗೆ ಪರಶುರಾಮಪ್ಪ, ರಾಜಕೀಯ ಕ್ಷೇತ್ರದಿಂದ ಜಿ.ಪಂ ಅಧ್ಯಕ್ಷೆ ಮಾಜಿ ಕೆ.ವಿ.ಶಾಂತಕುಮಾರಿ ಶಶಿಧರ್ ಅವರು ಭಾಜನರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ ಮಾತನಾಡಿ, ಸರ್ಕಾರಿ ಕಛೇರಿಗಳಲ್ಲಿ ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಬೇಕು. ನಂತರ ತಾಲ್ಲೂಕು ಕಛೇರಿ ಆವರಣದಲ್ಲಿ ಬೆಳಿಗ್ಗೆ 9 ಕ್ಕೆ ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಸಂದರ್ಭದಲ್ಲಿ ಗ್ರೇಡ್-2 ತಹಶೀಲ್ದಾರ್ ರಾಮಚಂದ್ರಪ್ಪ, ಆರ್.ಐ.ಕುಬೇಂದ್ರನಾಯ್ಕ, ಮಲ್ಲಿಕಾರ್ಜುನ್ ಸೇರಿದಂತೆ ಉಪಸ್ಥಿತರಿದ್ದರು.

## ಸೇನೆಯ ಹವಾಲ್ದಾರ್ ನಿವೃತ್ತಿಯಾಗಿ ನಾಳೆ ತಾಯ್ನಾಡಿಗೆ : ನಗರದಲ್ಲಿ ಸ್ವಾಗತ



ದಾವಣಗೆರೆ, ಅ.31- ಚನ್ನಗಿರಿ ತಾಲ್ಲೂಕಿನ ಮರಡಿ ಗ್ರಾಮದ ಎಂ.ಪಿ. ಕುಮಾರ್ ಅವರು ಭಾರತೀಯ ಸೇನೆಯಲ್ಲಿ 18 ವರ್ಷಗಳ ಸೇವೆ ಸಲ್ಲಿಸಿ, ನಿವೃತ್ತಿಯಾಗಿ ನ. 2 ರಂದು ಬೆಳಿಗ್ಗೆ 10.45 ಕ್ಕೆ ನಗರದ ರೈಲ್ವೆ ನಿಲ್ದಾಣಕ್ಕೆ ಆಗಮಿಸಲಿದ್ದು, ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲಾಗುವುದು. ಈ ಸಂದರ್ಭದಲ್ಲಿ ಡಿಸಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ಸೇರಿದಂತೆ ಅನೇಕರು ಉಪಸ್ಥಿತರಿರುವರು. ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಲೋಕಿಕೆರೆ ಸಿದ್ದಪ್ಪ ಮನವಿ ಮಾಡಿದ್ದಾರೆ.

# ಪುಸ್ತಕ ಎನ್ನುವುದು ನಮ್ಮ ಭವಿಷ್ಯ ರೂಪಿಸುವ ಶಕ್ತಿ




**ಪೌರಾಯುಕ್ತೆ ಎಸ್.ಲಕ್ಷ್ಮಿ**

ಹರಿಹರ, ಅ.31- ಪುಸ್ತಕ ಎನ್ನುವುದು ನಮ್ಮ ಭವಿಷ್ಯವನ್ನು ರೂಪಿಸುವ ಶಕ್ತಿ ಭಂಡಾರವಿದ್ದಂತೆ, ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಪೌರಾಯುಕ್ತೆ ಎಸ್.ಲಕ್ಷ್ಮಿ ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಸಭಾಂಗಣದಲ್ಲಿ ಎನ್.ಎಚ್. ಶ್ರೀನಿವಾಸ್ ಸ್ನೇಹ ಬಳಗದಿಂದ ಆಯೋಜಿಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪುಸ್ತಕಗಳನ್ನು ತಮಗೆ ಸಮಯ ಸಿಕ್ಕಾಗಲೆಲ್ಲಾ ಅಭ್ಯಾಸ ಮಾಡಿಕೊಳ್ಳಬೇಕು. ನಿಮ್ಮ ಕಾಲೇಜು ವಿದ್ಯಾಭ್ಯಾಸದ ಜೊತೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಅಭ್ಯಾಸ ಮಾಡಿಕೊಂಡು ಪ್ರಯತ್ನಗಳನ್ನು ಮಾಡುತ್ತಿರಬೇಕು. ಆಗ ಯಶಸ್ಸುಗಳಿಸಲು ಸಾಧ್ಯ. ಅನೇಕ ಆಯ್ಕೆಗಳನ್ನು ಇಟ್ಟುಕೊಳ್ಳದೆ 1 ಅಥವಾ 2 ಆಯ್ಕೆಗಳಿದ್ದರೆ, ಸುಲಭವಾಗಿ ಯಶಸ್ಸು ಹೊಂದಲು ಸಾಧ್ಯವಾಗುತ್ತದೆ. ಕಾಲೇಜು ಅಥವಾ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಓದಿನ ವಿಷಯದ ಜೊತೆಗೆ ಸಾಮಾನ್ಯ ಜ್ಞಾನ, ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಪಡೆದು ಅಭ್ಯಾಸ ಮಾಡಬೇಕು. ಜೊತೆಗೆ ನಿಮ್ಮ ಓದಿನ ಕಡೆಗೆ ಹೆಚ್ಚು ಗಮನ ಹರಿಸುವುದನ್ನುರೂಢಿ ಮಾಡಿಕೊಳ್ಳಬೇಕು. ದೇಶಕ್ಕಾಗಿ ತಮ್ಮ ಸೇವೆಯನ್ನು ಸಲ್ಲಿಸಿರುವ ಮಹನೀಯರಾದ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರಂತಹ ಮಹನೀಯರುಗಳ ಪುಸ್ತಕಗಳನ್ನು ಅಭ್ಯಸಿಸಿದಾಗ ಮನಸ್ಸು ಶಾಂತವಾಗಿ ಹೆಚ್ಚಿನ ಅಧ್ಯಯನ ಮಾಡಲು ಸಹಕಾರಿಯಾಗುತ್ತದೆ. ನಿಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತವೆ ಎಂದು ಹೇಳಿದರು

ಕಾರ್ಯಕ್ರಮದ ಅತಿಥಿಯಾಗಿ ಆಗಮಿಸಿದ್ದ ವಿಶ್ರಾಂತ ಪ್ರಾಂಶುಪಾಲ ಎಸ್.ಎಚ್.ಪ್ಯಾಟಿ ಮಾತನಾಡಿ, ಈ ಹಿಂದೆ ಇದ್ದಂತಹ ಮನಿ ಪವರ್, ಮ್ಯಾನ್ ಪವರ್, ಮಸಲ್ ಪವರ್‌ಗಳೆಲ್ಲ ಇಂದು ಶೂನ್ಯವಾಗಿದ್ದು, ಈಗ ಏನಿದ್ದರೂ ಮಾಹಿತಿ ಪವರ್ (ಇನ್ಫಾರ್ಮೇಶನ್ ಪವರ್) ಮಾತ್ರ ಅವಶ್ಯವಾಗಿದ್ದು, ಇದರಿಂದ ದೇಶ-ವಿದೇಶಗಳಲ್ಲಿ ಕೆಲಸ ನಿರ್ವಹಿಸಬಹುದಾಗಿದೆ. ಇಂದಿನ ವಿದ್ಯಾರ್ಥಿ ಪೀಳಿಗೆಯು ತಮ್ಮ ತಮ್ಮ ವೈಫಲ್ಯಗಳನ್ನು ಎದುರಿಸುವ ಶಕ್ತಿಯನ್ನು ಕಳೆದುಕೊಂಡಿವೆ. ಯಾವುದರಲ್ಲೇ ಆಗಲಿ ವಿಫಲವಾದಾಗ ಆತ್ಮಹತ್ಯೆಯಂತಹ ಕೃತ್ಯಕ್ಕೆ ಮೊರೆ ಹೋಗುವ ಮಟ್ಟಕ್ಕೆ ಬಂದು ನಿಂತಿವೆ. ಆದ್ದರಿಂದ ತಮ್ಮ ವೈಫಲ್ಯಗಳನ್ನು ಎದುರಿಸಿ, ಮುಂದಿನ ಯಶಸ್ಸಿಗೆ ದಾರಿ ಮಾಡಿಕೊಳ್ಳುವಂತಹ ಆತ್ಮಶಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಶಂಕರ್ ಖಟಾವಕರ್ ಮಾತನಾಡಿ, ಎನ್.ಎಚ್. ಶ್ರೀನಿವಾಸ್ ಬಳಗದವರು ಕೋವಿಡ್ ಸಂದರ್ಭದಲ್ಲಿ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅವರು ಯಾವುದೇ ಜಾತಿ, ಧರ್ಮ, ಮತ, ಲಿಂಗ ಭೇದವಿಲ್ಲದೆ ಎಲ್ಲಾ ರೀತಿಯ ಬಡವರು ಮತ್ತು ಅವಶ್ಯಕತೆ ಇದ್ದ ಎಲ್ಲರಿಗೂ ತಮ್ಮ ಸಹಾಯ ಹಸ್ತ ಚಾಚಿದ್ದಾರೆ. ಅದರಂತೆ ಈಗ ತಾಲ್ಲೂಕಿನ ಬಡ ವಿದ್ಯಾರ್ಥಿಗಳ ಏಳಿಗೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ತರಬೇತಿ ಕಾರ್ಯಾಗಾರ ಪ್ರಾರಂಭಿಸಿದ್ದಾರೆ. ತಾಲ್ಲೂಕಿನ ಎಲ್ಲಾ ಅರ್ಹ ವಿದ್ಯಾರ್ಥಿಗಳು ಇದರ ಲಾಭ ಪಡೆದು ಮುಂದೆ ಉನ್ನತ ಹುದ್ದೆಗಳಿಗೆ ಆಯ್ಕೆಯಾಗಿ, ಹುಟ್ಟೂರಿನ ಅಭಿವೃದ್ಧಿಗೆ ಸಹಕರಿಸುವಂತಾಗಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀನಿವಾಸ್, ನಮ್ಮೆಲ್ಲ ಮಿತ್ರರುಗಳೊಂದಿಗೆ ಕೆಲ ವಿಚಾರವಾಗಿ ಚರ್ಚಿಸಿ, ತಾಲ್ಲೂಕಿನ ಎಲ್ಲಾ ವಿದ್ಯಾರ್ಥಿಗಳು ತರಬೇತಿಯನ್ನು ಆಯೋಜನೆ ಮಾಡಲಾಗಿರುತ್ತದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಉಚಿತ ಎಂದು ದುರ್ಲಾಭ ಪಡೆಯದೇ ಶ್ರದ್ಧೆಯಿಂದ ಅಭ್ಯಸಿಸಿ ಯಶಸ್ಸು ಹೊಂದವಂತಾಗಲಿ ಎಂದು ಹೇಳಿ, ಇಂದಿನ ಕಾರ್ಯಾಗಾರದಲ್ಲಿ 180 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಯುವನಟ ಪುನೀತ್ ರಾಜಕುಮಾರ್‌ರವರ ಅಕಾಲಿಕ ಮರಣದ ಹಿನ್ನೆಲೆಯಲ್ಲಿ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕೆ.ಗೀತಾ ಸ್ವಾಗತಿಸಿದರು. ಬಿ.ಡಿ. ಮಹೇಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ.ಬಿ.ರೇವಣ್ಣ ನಾಯಕ್ ನಿರೂಪಿಸಿ, ವಂದಿಸಿದರು.

ಈ ಸಮಯದಲ್ಲಿ ಎಲ್‌ಐಸಿ ಮಂಜುನಾಥ್, ಪ್ರಕಾಶ್, ಆರ್.ರಾಘವೇಂದ್ರ, ಗ್ರಾ.ಪಂ.ಸದಸ್ಯ ನಾಗೇಂದ್ರಪ್ಪ, ನಿವೃತ್ತ ಪ್ರಾಂಶುಪಾಲ ಸಿದ್ದಪ್ಪ, ಆಟೋ ಚಾಲಕರ ಸಂಘದ ಅಧ್ಯಕ್ಷ ಮೋಹನ್, ಸ್ನೇಹ ಬಳಗದ ಸದಸ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಇಂದು ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯ ಸಮಾರೋಪ

ಕರ್ನಾಟಕ ರಾಜ್ಯ ವೇಟ್ ಲಿಫ್ಟರ್ಸ್ ಅಸೋಸಿಯೇಷನ್, ದಾವಣಗೆರೆ ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆ ಇಂದು ಸಂಜೆ 4.30 ಕ್ಕೆ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಸಮಾರೋಪಗೊಳ್ಳಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಡಾ. ಜಿ.ಎಂ. ಸಿದ್ದೇಶ್ವರ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ. ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಹೆಚ್. ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.


ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಡಾ. ಮಹೇಶ್, ಡಾ. ರುದ್ರಮುನಿ, ಡಾ. ನಿಜಲಿಂಗಪ್ಪ ಕಾಳಪ್ಪನವರ್, ಹೆಚ್.ಆರ್. ಅಶೋಕ ರೆಡ್ಡಿ, ಎಸ್. ಶಿವಣ್ಣ, ಆರ್. ಲಕ್ಷ್ಮಣ, ಮಾರುತಿರಾವ್ ಘಾಟ್ಗೆ, ಗೌರಮ್ಮ ಪಾಟೀಲ್, ಡಾ. ಜಿ.ಎಂ. ಸಂತೋಷ್, ಆರ್. ಶಿವಪ್ರಕಾಶ್, ಬಿ ವೀರಣ್ಣ, ವಿನಾಯಕ ಪೈಲ್ವಾನ್, ಎ. ನಾಗರಾಜ್, ಹೆಚ್. ಬಸವರಾಜ್, ಷಣ್ಮುಖ, ವಾಸುದೇವ ರಾಯ್ಕರ್, ಸತ್ಯನಾರಾಯಣ, ಹನುಮಂತಪ್ಪ, ಕೆ. ಕುಮಾರ್, ಕೆ. ದುಗ್ಗೇಶಪ್ಪ, ಟಿ.ಎನ್. ರವಿಕುಮಾರ್, ಹೆಚ್.ವಿ. ಪ್ರಶಾಂತ್, ಡಿ.ವಿ. ಮಲ್ಲಿಕಾರ್ಜುನ್, ಹೆಚ್. ಜಯ್ಯಣ್ಣ ಭಾಗವಹಿಸಲಿದ್ದಾರೆ.

**ರಿಟೇಲ್ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ**

ತಿಂಗಳಿಗೆ 50 ಸಾವಿರದಿಂದ 60 ಸಾವಿರ ಆದಾಯ ಗಳಿಸಬಹುದಾದ ಸ್ವಂತ ಉದ್ದಮವಾಗಿರುತ್ತದೆ. 5 ರೂ MRP ದರ ಹೊಂದಿರುವ ಆಹಾರ ಉತ್ಪನ್ನದ ಪ್ಯಾಕೆಟ್‌ಗಳನ್ನು ನಗರದಾದ್ಯಂತ ದಿನಕ್ಕೆ 1 ವಾರ್ಡ್‌ನಂತೆ ಸಂಚರಿಸಿ ರಿಟೇಲ್ ಅಂಗಡಿಗಳಿಗೆ ಮಾರಾಟ ಮಾಡಿಕೊಳ್ಳುವುದಾಗಿರುತ್ತದೆ. ಒಂದು ನಗರ ಪ್ರದೇಶಕ್ಕೆ ಕೇವಲ ಒಬ್ಬ ರಿಟೇಲ್ ಡಿಸ್ಟ್ರಿಬ್ಯೂಟರನ್ನು ಮಾತ್ರ ನೇಮಿಸಲಾಗುತ್ತದೆ. 1) ದಾವಣಗೆರೆ 2) ಚಿತ್ರದುರ್ಗ 3) ಹರಿಹರ 4) ರಾಣೇಬೇನ್ನೂರು 5) ವಿಜಯನಗರ ಜಿಲ್ಲೆ 6) ಬಳ್ಳಾರಿ 7) ಶಿವಮೊಗ್ಗ ಈ ನಗರಗಳಿಗೆ ರಿಟೇಲ್ ಡಿಸ್ಟ್ರಿಬ್ಯೂಟರ್‌ಗಳ ಅವಶ್ಯಕವಿರುತ್ತದೆ.

ವಿ ಸೂ: ರಿಟೇಲ್ ಡಿಸ್ಟ್ರಿಬ್ಯೂಟರ್‌ಗಳು ಕನಿಷ್ಠ 60 ಸಾವಿರ ಬಂಡವಾಳ ಹಾಗೂ ಸ್ವಂತ ದ್ವಿಚಕ್ರ ವಾಹನಗಳನ್ನು ಹೊಂದಿರುವ ಅವಶ್ಯಕತೆ ಇರುತ್ತದೆ. ಆಸಕ್ತರು ಕೂಡಲೇ ಸಂಪರ್ಕಿಸಿ

ಮೊ: 80885 46788



**ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ**

**ಸ್ವಯಂ ಪ್ರೇರಿತ ರಕ್ತದಾನ ಶಿಬಿರ**

ದಿನಾಂಕ 1.11.2021, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ

**ಸ್ತ್ರೀ ಸಂಬಂಧಿತ ಸಮಸ್ಯೆಗಳಿಗೆ ಉಚಿತ ಚಿಕಿತ್ಸೆ ಮತ್ತು ತಪಾಸಣೆ ಶಿಬಿರ**

ದಿನಾಂಕ 02.11.2021, ಸಮಯ ಬೆ.10 ಗಂಟೆಯಿಂದ ಮಧ್ಯಾಹ್ನ 2 ಗಂಟೆ ವರೆಗೆ

**ಲೋಕ ಕಲ್ಯಾಣಾರ್ಥವಾಗಿ ಧನ್ವಂತರಿ ಹೋಮ**

ದಿನಾಂಕ 3.11.2021, ಸಮಯ ಬೆಳಗ್ಗೆ 9.30 ಗಂಟೆಗೆ ಹೋಮದ ಪ್ರಸಾದದ ರೂಪದಲ್ಲಿ ವಿಶೇಷವಾದ ಧನ್ವಂತರಿ ಮಾತ್ರೆಗಳನ್ನು ಉಚಿತವಾಗಿ ವಿತರಿಸಲಾಗುವುದು. (ಮೊದಲ 100 ಜನರಿಗೆ ಮಾತ್ರ) (ಕೆಮ್ಮು, ದಮ್ಮು, ಹೃದಯ ಸಂಬಂಧಿ ಕಾಯಿಲೆ, ಜಠರ ಸಮಸ್ಯೆಗಳಿಗೆ ಬಹು ಉಪಯುಕ್ತ ಔಷಧಿ)

ANVAYA

**ಅನ್ವಯ ಆಯುರ್ವೇದ ಆಸ್ಪತ್ರೆ**

#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ

ಫೋ: 08192 252228 ಮೊ: 86186 42929

# ಜಗಳೂರಿನ ಹಿರಿಯ ನಾಟಿ ವೈದ್ಯೆ ಸುಲ್ತಾನಿಬೀ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ

ಬಿ.ಪಿ.ಸುಬಾನ್

ಜಗಳೂರು, ಅ.31- 66ನೇ ಕನ್ನಡ ರಾಜೋತ್ಸವದ ಅಂಗವಾಗಿ 66 ಜನ ಸಾಧಕರಿಗೆ ಸರ್ಕಾರ ಪ್ರಶಸ್ತಿ ನೀಡಿದ್ದು, ಜಗಳೂರಿನ ಸೂಲಗಿತ್ತಿ ಹಾಗೂ ನಾಟಿ ವೈದ್ಯೆ ಸುಲ್ತಾನಿಬೀ (75) ಅವರು ರಾಜ್ಯೋತ್ಸವ ಪ್ರಶಸ್ತಿಗೆ ಭಜನರಾಗಿರುವುದರಿಂದ ತಾಲ್ಲೂಕಿನ ಜನತೆ ಹರ್ಷ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ಗೊಲ್ಲರಹಟ್ಟಿ ಗ್ರಾಮದ ಸುಲ್ತಾನಿಬೀ ಅವರು ಚರ್ಮರೋಗ, ಇಸುಬು, ಹುಳಕಡ್ಡಿಗೆ ನಾಟಿ ಚಿಕಿತ್ಸೆಯಲ್ಲಿ ಸಿದ್ಧಹಸ್ತರು, 'ನಾಟಿ ವೈದ್ಯೆ' ಎಂದು ಗ್ರಾಮೀಣ ಪ್ರದೇಶದಲ್ಲಿ ಹೆಸರು ಮಾಡಿದ್ದಾರೆ. ಇಂತಹ ಗ್ರಾಮೀಣ ಪ್ರತಿಭೆಯನ್ನು ಗುರುತಿಸಿ, 2021ರ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಶ್ಲಾಘನೀಯ.

ದಿನಕ್ಕೆ 10 ರಿಂದ 20 ಜನರಿಗೆ ಚರ್ಮ ರೋಗಕ್ಕೆ ಚಿಕಿತ್ಸೆ ಮಾಡುತ್ತಿದ್ದರು, ಇವರ ಖ್ಯಾತಿ ಅನ್ಯ ರಾಜ್ಯಗಳಲ್ಲೂ ಹರಡಿತ್ತು. ಸುಲ್ತಾನಿಬೀ ಅವರ ಸಮಾಜ ಸೇವಾ ಕಾರ್ಯಗಳನ್ನು ಗುರುತಿಸಿ, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಕಸಾಪ ದಿಂದ ಗ್ರಾಮೀಣ ಸಿರಿ ಪ್ರಶಸ್ತಿ, ಸನ್ಮಾನ, ಪುರಸ್ಕಾರಗಳನ್ನು ನೀಡಿ ಗೌರವಿಸಲಾಗಿತ್ತು.



**10 ಸಾವಿರಕ್ಕೂ ಹೆಚ್ಚು ಹೆರಿಗೆ :** ಗ್ರಾಮೀಣ ಪ್ರದೇಶದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿರುವ ಇವರಿಗೆ ಸೂಲಗಿತ್ತಿ ಕಾರ್ಯಕ್ಕೆ ಆರೋಗ್ಯ ಇಲಾಖೆಯಿಂದ ಹೆರಿಗೆ ಕಿಟ್ ನೀಡಲಾಗಿದೆ. ಇವರು ತಮ್ಮ ಬಳಿ ಬಂದಿದ್ದ ಎಲ್ಲಾ ಹೆರಿಗೆಗಳನ್ನು ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

**ಹಾವು ಹಿಡಿಯುವುದರಲ್ಲೂ ಪ್ರವೀಣೆ :** ನಾಟಿ ವೈದ್ಯೆ ಸುಲ್ತಾನಿಬೀ ಅವರು ಹಾವು ಹಿಡಿಯುವುದರಲ್ಲೂ ಪ್ರವೀಣೆಯಾಗಿದ್ದಾರೆ. ಪಟ್ಟಣದಲ್ಲಿ ಎಲ್ಲೇ ಹಾವು ಕಾಣಿಸಿಕೊಂಡರೂ ಸುಲ್ತಾನ್‌ಬೀ ಹಾಜರಾಗುತಿದ್ದರು. ಸುಮಾರು 75 ವರ್ಷದ ಇಳಿವಯಸ್ಸಿನಲ್ಲೂ ಸಹ ಪ್ರಸ್ತುತ ಗೊಲ್ಲರಹಟ್ಟಿ ಗ್ರಾಮದಲ್ಲಿ ಮುರುಕಲು ಹೆಂಚಿನ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ.

**ಶಾಸಕ ಎಸ್.ವಿ.ಆರ್. ಅಭಿನಂದನೆ :** 2021ನೇ ವರ್ಷದ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದ ಸುಲ್ತಾನಿಬೀ ಅವರಿಗೆ ಶಾಸಕ ಎಸ್.ವಿ.ರಾಮಚಂದ್ರ ಅವರು ಶುಭಾಶಯ ಕೋರಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಸುಲ್ತಾನಿಬೀ ಅವರ ಸಮಾಜ ಸೇವಾ ಕಾರ್ಯಗಳು ಇಂದಿನ ಯುವ ಪೀಳಿಗೆಗೆ ಮಾದರಿಯಯಾಗಿವೆ ಎಂದು ತಿಳಿಸಿದ್ದಾರೆ.

## ಕಿಸಾನ್ ರೈಲುಗಳಿಂದ ರೈಲ್ವೆಗೆ ಹೊರೆ

ನವದೆಹಲಿ, ಅ. 31 – ಕಿಸಾನ್ ರೈಲುಗಳಿಂದ ರೈತರಿಗೆ ನೆರವಾಗಿದ್ದರೂ ಸಹ, ರೈಲ್ವೆಗೆ 40 ಕೋಟಿ ರೂ.ಗಳ ಹೊರೆಯಾಗಿದೆ. ಶೇ.50ರ ವಿನಾಯಿತಿ ದರದಲ್ಲಿ ಈ ರೈಲುಗಳನ್ನು ವರ್ಷದಿಂದ ಓಡಿಸುತ್ತಿದ್ದು, ರೈಲ್ವೆಗೆ ನೀಡಬೇಕಿರುವ ಬಾಕಿಯನ್ನು ಕೇಂದ್ರ ಆಹಾರ ಸಂಸ್ಕರಣಾ ಉದ್ಯಮ ಸಚಿವಾಲಯ ಪಾವತಿಸಿಲ್ಲ.

ಅಕ್ಟೋಬರ್ 14, 2020ರಿಂದ ಅಕ್ಟೋಬರ್ 10, 2021ರ ನಡುವೆ ರೈಲ್ವೆಯು ಕಿಸಾನ್ ರೈಲುಗಳಿಗೆ 95 ಕೋಟಿ ರೂ. ಸಬ್ಸಿಡಿ ಪಾವತಿಸಿದೆ.

ಹಣ್ಣು ಹಾಗೂ ತರಕಾರಿಗಳನ್ನು ಕಿಸಾನ್ ರೈಲುಗಳ ಮೂಲಕ ಸಾಗಿಸಲಾಗುತ್ತದೆ. ಇದಕ್ಕೆ ಆಗುವ ವೆಚ್ಚದ ಅರ್ಧದಷ್ಟು ಸಬ್ಸಿಡಿಯನ್ನು ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯ ಪಾವತಿಸಬೇಕಿದೆ. ಆದರೆ, ಸಚಿವಾಲಯ ಇನ್ನೂ ರೈಲ್ವೆಗೆ ಹಣ ಪಾವತಿ ಮಾಡಿಲ್ಲ.

ಅಕ್ಟೋಬರ್ 2020ರ ನಂತರ ರೈಲ್ವೆಯು 1,455 ಕಿಸಾನ್ ರೈಲುಗಳನ್ನು 129 ಮಾರ್ಗಗಳಲ್ಲಿ ಓಡಿಸಿದೆ. 182.46 ಕೋಟಿ ರೂ. ಮೌಲ್ಯದ 4.78 ಲಕ್ಷ ಟನ್ ಸರಕುಗಳನ್ನು ಸಾಗಣೆ ಮಾಡಲಾಗಿದೆ.

ಈ ರೈಲುಗಳಿಗಾಗಿ ರೈಲ್ವೆ 94.92 ಕೋಟಿ ರೂ. ಸಬ್ಸಿಡಿ ನೀಡಿದೆ. ಈ ಪೈಕಿ ಸಚಿವಾ ಲಯ 55 ಕೋಟಿ ರೂ.ಗಳನ್ನು ಮಾತ್ರ ಪಾವತಿಸಿದೆ. ಕಿಸಾನ್ ರೈಲುಗಳ ಬೇಡಿಕೆ ಹೆಚ್ಚಾಗುತ್ತಿದ್ದು, ಇವುಗಳನ್ನು ನಿರ್ವಹಿಸಲು ಕನಿಷ್ಠ 150 ಕೋಟಿ ರೂ.ಗಳ ನಿಧಿ ಹೊಂದಬೇಕಿದೆ ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಸಬ್ಸಿಡಿ ಪಾವತಿಯ ಕುರಿತು ಆಹಾರ ಸಚಿವಾಲಯ ಉತ್ತರ ನೀಡುವ ವರೆಗೂ ನಾವು ಈ ಸೇವೆ ನಿಲ್ಲಿಸುವುದಿಲ್ಲ. ಸಬ್ಸಿಡಿ ನೀಡಲು ಸಾಧ್ಯವಾಗದು ಎಂದು ಆಹಾರ ಸಚಿವಾಲಯ ಹೇಳಿದರೆ, ಈ ಬಗ್ಗೆ ನಿರ್ಧಾರತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## ಸತತ 4ನೇ ದಿನ ಇಂಧನ ಬೆಲೆ ಏರಿಕೆ

ನವದೆಹಲಿ, ಅ. 31 - ಸತತ ನಾಲ್ಕನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಲೀಟರ್‌ಗೆ 35 ಪೈಸೆ ಹೆಚ್ಚಿಸಲಾಗಿದೆ. ಸ್ಥಳೀಯ ತೆರಿಗೆಗಳ ಕಾರಣದಿಂದಾಗಿ ಮಧ್ಯ ಪ್ರದೇಶದಂತಹ ರಾಜ್ಯಗಳಲ್ಲಿ ಪೆಟ್ರೋಲ್ ಬೆಲೆ ಅತ್ಯಂತ ದುಬಾರಿ ಹಂತಕ್ಕೆ ತಲುಪಿದೆ.

ಅಕ್ಟೋಬರ್ 25 ರಿಂದ 27ರ ನಡುವೆ ತೈಲ ಬೆಲೆ ಬದಲಿಸಿರಲಿಲ್ಲ. ನಂತರ ಸತತ ನಾಲ್ಕು ದಿನ ತೈಲ ಬೆಲೆ ಹೆಚ್ಚಿಸಲಾಗಿದೆ.

ಮಧ್ಯ ಪ್ರದೇಶದ ಪನ್ನ, ಸತ್ನ, ರೇವಾ, ಶಹದೋಲ್, ಚಿಂದ್ವಾರ ಹಾಗೂ ಬಾಲಘಾಟ್ ಪ್ರದೇಶಗಳಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 120 ರೂ.ಗಳ ಗಡಿ ದಾಟಿದೆ. ರಾಜಸ್ಥಾನದ ಗಂಗಾನಗರದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 121.52 ರೂ. ಆಗಿದೆ. ಇಲ್ಲಿ ಡೀಸೆಲ್ ದರ ಲೀಟರ್‌ಗೆ 112.44 ರೂ.


**ವಾಣಿಜ್ಯೋದ್ದೇಶಕ್ಕಾಗಿ ಬಾಡಿಗೆಗೆ ಜಾಗ ಬೇಕಾಗಿದೆ**

ಪ್ರತಿ ಕಾಲಂನ ಕನಿಷ್ಠ ಅಂತರ 16 ಅಡಿ ಅಗಲ ಇರುವ ನೆಲ ಅಂತಸ್ತು 2000 ಅಡಿ ಅಥವಾ 1500 ಅಡಿ ನೆಲಮಹಡಿ ಮತ್ತು 1ನೇ ಮಹಡಿ ಹಾಗೂ ಕನಿಷ್ಠ 40 ಅಡಿ ಮುಂಭಾಗ ಆವರಣವಿರುವ ಜಾಗವು ವಾಣಿಜ್ಯೋದ್ದೇಶಕ್ಕಾಗಿ ಬೇಕಾಗಿದೆ.

ಸ್ಥಳ: ಎಂಸಿಸಿ 'ಎ' ಬ್ಲಾಕ್/ಎಂಸಿಸಿ 'ಬಿ' ಬ್ಲಾಕ್/ಪಿ.ಜೆ. ಬಡಾವಣೆ

ಆಸ್ತಿ ಮಾಲೀಕರು ನೇರವಾಗಿ ಸಂಪರ್ಕಿಸಿ :

ಫೋನ್ : 08182-268035


## ನಗರಕ್ಕೆ ಇಂದು ಉಸ್ತುವಾರಿ ಸಚಿವರು

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಇಂದು ಬೆಳಿಗ್ಗೆ 10 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ರಿಂದ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಹಿರಿಯ, ಕಿರಿಯ ಮಹಿಳೆ ಮತ್ತು ಪುರುಷರ ಹಾಗೂ ಬಾಲಕ-ಬಾಲಕಿಯರ ವೇಟ್ ಲಿಫ್ಟಿಂಗ್ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಬಹುಮಾನ ವಿತರಿಸಲಿದ್ದಾರೆ.

ಮಧ್ಯಾಹ್ನ 1 ಕ್ಕೆ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುರ್ಕಿ ಗ್ರಾಮಕ್ಕೆ ಭೇಟಿ ನೀಡುವರು. ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ.

## ಇಂದು 66 ನೇ ರಾಜ್ಯೋತ್ಸವ


ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನ ವತಿಯಿಂದ ಇಂದು ಬೆಳಿಗ್ಗೆ 8.30 ಕ್ಕೆ ಕಾಲೇಜಿನ ಆವರಣದಲ್ಲಿ 66 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಮಂಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಪ್ರಾಂಶುಪಾಲ ಪ್ರೊ.ಎ.ಡಿ. ಬಸಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

## ನಾಳೆ ದಿಶಾ ಸಮಿತಿ ಸಭೆ

ದಾವಣಗೆರೆ, ಅ.31- ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯನ್ನು ನಾಡಿದ್ದು ದಿನಾಂಕ 2 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತಿ ಮುಖ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಸಂಸದ ಡಾ.ಜಿ.ಎಂ.ಸಿದ್ದೇಶ್ವರ ವಹಿಸುವರು ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ತಿಳಿಸಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 28.10.2021ರಂದು ನಿಧನರಾದ ನಮ್ಮ ಪ್ರೀತಿಯ ಸಹೋದರರಾದ

**ಶ್ರೀ ಜಿ.ಎಸ್. ಬಸವರಾಜು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶೋಭ ಯದವಾಡ್, ಕೆನಡಾ ದೀಪ್ತಿ ಯದವಾಡ್, ಕೆನಡಾ
ರತ್ನಮ್ಮ ಪಾಟೀಲ್, ಬ್ಯಾಡಗಿ ಮೀನಾಕ್ಷಮ್ಮ ಪಟೇಲ್, ಕೆಚ್ಚೆನಹಳ್ಳಿ



**ವಿವೇಕಾನಂದ ಎಸ್. ಕರೇಗೌಡರ್ (ಜಿಂಗಿ) ನಿಧನ**



ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್ ದಾವಣಗೆರೆ ಹಾರ್ಟ್ ಆಸ್ಪತ್ರೆ ಹತ್ತಿರದ ಡೋರ್ ನಂ. 3642 ವಾಸಿ, ನಿವೃತ್ತ ಡಿವೈಎಸ್ಪಿ ಎಸ್.ಎನ್. ಕರೇಗೌಡರ್ ಇವರ ಪುತ್ರ

**ವಿವೇಕಾನಂದ ಎಸ್. ಕರೇಗೌಡರ್ (ಜಿಂಗಿ)**

ಇವರು ದಿನಾಂಕ 31.10.2021ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 48 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.11.2021ರ ಸೋಮವಾರ ಮಧ್ಯಾಹ್ನ 12.30ಕ್ಕೆ ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕು ಕಿರಿಗೇರಿ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ: ಮೊ: 94487 66603



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 31.10.2021ರಂದು ನಿಧನರಾದ ನಿವೃತ್ತ ಡಿವೈಎಸ್ಪಿ ಎಸ್.ಎನ್. ಕರೇಗೌಡರ್ ಇವರ ಪುತ್ರ ಹಾಗೂ ನಮ್ಮ ಆತ್ಮೀಯ ಮಿತ್ರ

**ವಿವೇಕಾನಂದ ಎಸ್. ಕರೇಗೌಡರ್ (ಜಿಂಗಿ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಗಡಿಗುಡಾಳ್ ಮಂಜುನಾಥ್ ಮತ್ತು ಸ್ನೇಹ ಬಳಗ ಹಾಗೂ ಸಮಸ್ತ ನಾಗರಿಕರು
ಎಂ.ಸಿ.ಸಿ. ಬಿ' ಬ್ಲಾಕ್, ದಾವಣಗೆರೆ.



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 31.10.2021ರಂದು ನಿಧನರಾದ ನಮ್ಮ ಆತ್ಮೀಯ ಮಿತ್ರ

**ವಿವೇಕಾನಂದ ಎಸ್. ಕರೇಗೌಡರ್ (ಜಿಂಗಿ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

* ಗಣೇಶ್ ದಾಸಕರಿಯಪ್ಪ, ಜಿಲ್ಲಾ ಜೆಡಿಎಸ್ ಕಾರ್ಯಾಧ್ಯಕ್ಷರು
* ಗಡಿಗುಡಾಳ್ ಮಂಜುನಾಥ್, ಮಹಾನಗರ ಪಾಲಿಕೆ ಸದಸ್ಯರು
* ಶಿವುಕುಮಾರ್ (ಚಾಮುಂಡಿ)
* ಜ್ಯೋತಿ ಪ್ರಸನ್ನ (ಬಾತಿಗೌಡ್ರು)
* ವೀರೇಶ್ ಆರ್ (ಬ್ಯಾಸ್ಕೆಟ್ ಬಾಲ್ ಕೋಚ್)
* ಹಾಲೇಶ್ ಹೆಚ್.ಸಿ
* ದಯಾನಂದ (ಮಂಡಕ್ಕಿ)
* ವೀರೇಂದ್ರ ಪ್ರಸಾದ್
* ಹಾಲೇಶ್ ಬಿ.ಎಂ.ಸಿ
* ಗೌತಮ್ ಪಟೇಲ್
* ಜೆ.ಎ. ಕರಿಸಿದ್ದಪ್ಪ
* ಜಗದೀಶ್ ಕೆ.ಎಂ. (ಕುರುಡಿ)
* ಸಂಗಮೇಶ್ (ಗುಂಡ)
* ಪಿಂಟು ರಿಚರ್ಡ್
* ಸುರೇಶ್ (ಇಂಜಿನಿಯರ್)
* ಜಾನ್ (ಜಾನ್ ಟೆಕ್ಸ್‌ಟೈಲ್ಸ್)
* ದೇವರಾಜ್ ಬೋರ್‌ವೆಲ್
* ಹೆಚ್.ಎಂ. ಗಿರೀಶ್
* ಗಿರೀಶ್ (ಸ್ಪಿರಿಟ್)
* ವೆಂಕಟೇಶ್ (ಲಂಕ)
* ಯಾಯ್ಯಾ
* ರಾಕೇಶ್ ಮೂರ್ತಿ







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte